॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣ ವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋ ನಮಃ

ಆನಂದ ತೀರ್ಥಕೃತೆ ಶ್ರೀಮಹಾಭಾರತ ತಾತ್ಪರ್ಯ ನಿರ್ಣಯೆ ದುಷ್ಟನಿಗ್ರಯನಾಮಕೊ ।

ಅಥ ಚತುರ್ದಶಾಧ್ಯಾಯಃ

ಹದಿನೇ ಅಧ್ಯಾಯವು

ಕೃಷ್ಣೊ ವಿಮೋಚ್ಯ ಪಿತರಾವಭಿವಂದ್ಯ ಸರ್ವವಂದ್ಯೋಪಿ ರಾಮಸಹಿತಃ ಪರಿಪಾಲನಾಯ ।
ಧರ್ಮಸ್ಯ ರಾಜ್ಯಪದವೀಂ ಪ್ರಣಿಧಾಯ ಚೋಗ್ರಸೇನೆ ದ್ವಿಜತ್ವಮುಪಗಮ್ಯ ಮುಮೋಚ ನಂದಂ ॥ ೧ ॥

ಅನ್ವಯಾರ್ಥಃ ಕೃಷ್ಣಃ=ಶ್ರೀಕೃಷ್ಣನು ಪಿತರೌ=ತಂದೆ ತಾಯಿಯರಾದ ವಸುದೇವ ದೇವಕಿಯರನ್ನು ವಿಮೋಚ್ಯ=ಬಂಧನದಿಂದ ಬಿಡಿಸಿ, ಧರ್ಮ ಪರಿಪಾಲನಾಯ=ಧರ್ಮದ ಸಂರಕ್ಷಣೆಗೋಸ್ಕರ ರಾಮಸಹಿತಃಸನ್=ಬಲರಾಮನಿಂದ ಕೂಡಿಕೊಂಡು ಸರ್ವವಂದ್ಯೋಪಿ=ಎಲ್ಲರಿಂದಲೂ (ಬ್ರಹ್ಮಾದಿಗಳಿಂದಲೂ) ನಮಸ್ಕರಿಸಲು ಯೋಗ್ಯನಾದರೂ ಪಿತರೌ=ತಂದೆತಾಯಿಯರನ್ನು ಅಭಿವಂದ್ಯ=ನಮಸ್ಕರಿಸಿ, ಉಗ್ರಸೇನೆ=ಅಜ್ಜನಾದ ಉಗ್ರಸೇನನಲ್ಲಿ ರಾಜ್ಯಪದವೀಂ=ಮಥುರಾ ಪಟ್ಟಣದ ಅಧಿಕಾರವನ್ನು ಪ್ರಣಿಧಾಯ=ಇಟ್ಟು ಚ=ಮತ್ತು ದ್ವಿಜತ್ವಂ=ಉಪನಯನದಲ್ಲಿ ಗಾಯತ್ರೀ ತೇಜಸ್ಸನ್ನು ಉಪಗಮ್ಯ=ಹೊಂದಿ (ವಸುದೇವನಿಂದ ಎಂಬುದನ್ನು ಇಟ್ಟುಕೊಳ್ಳಬೇಕು.) ನಂದಂ=ನಂದ ಗೋಪನನ್ನು ಮುಮೋಚ=ಬಿಟ್ಟನು. (ವೃಂದಾವನಕ್ಕೆ ಕಳಿಸಿ ಕೊಟ್ಟನು. ॥ ೧ ॥

ನಂದೋಪಿ ಸಾಂತ್ವ ವಚನೈರನುನೀಯ ಮುಕ್ತಃ ಕೃಷ್ಣೇನ ತಚ್ಚರಣಪಂಕಜಮಾತ್ಮ ಸಂಸ್ಥಮ್ ।
ಕೃತ್ವಾ ಜಗಾಮ ಸಹಿ ಗೋಪಗಣೇನ ಕೃಚ್ಛ್ರಾತ್ ಧ್ಯಾಯನ್ ಜನಾರ್ದನಮುವಾಸ ವನೇ ಸಭಾರ್ಯಃ ॥ ೨ ॥

ಅನ್ವಯಾರ್ಥಃ ಕೃಷ್ಣೇನ=ಕೃಷ್ಣನಿಂದ ನಂದೋಪಿನಂದ ಗೋಪನಾದರೂ ಸಾಂತ್ವವಚನೈಃ=ದುಃಖವನ್ನು ಪರಿಹಾರ ಮಾಡತಕ್ಕ ಮಾತುಗಳಿಂದ ಅನುನೀಯ=ಸಮಾಧಾನ ಪಡಿಸಿ ಮುಕ್ತಃಸನ್ = ಕಳಿಸಲ್ಪಟ್ಟವನಾಗಿ ತಚ್ಚರಣಪಂಕಜಂ=ಶ್ರೀಕೃಷ್ಣನ ಪಾದಕಮಲವನ್ನು ಆತ್ಮಸಂಸ್ಥಂ=ತನ್ನ ಅಂತಃಕರಣದಲ್ಲಿ ಇದ್ದುದ್ದನ್ನಾಗಿ ಕೃತ್ವಾ=ಮಾಡಿ ಗೋಪಗಣೇನ ಸಹ=ಗೋಪಾಲಕರ ಸಮೂಹದಿಂದ ಕೂಡಿಕೊಂಡು ಕೃಚ್ಛ್ರಾತ್=ಕಷ್ಟದಿಂದ ಜಗಾಮ=ಹೋದನು ಸಃ=ಆ ನಂದನು ಸಭಾರ್ಯಃಸನ್=ಹೆಂಡತಿಯಿಂದ ಕೂಡಿಕೊಂಡವನಾಗಿ ಜನಾರ್ದನಂ=ಶ್ರೀಕೃಷ್ಣನನ್ನು ಧ್ಯಾಯನ್=ಧ್ಯಾನಿಸುತ್ತಾ ವನೇ = ವೃಂದಾವನದಲ್ಲಿ ಉವಾಸ=ಧ್ಯಾನಮಾಡಿದನು. ॥ ೨ ॥

ಕೃಷ್ಣೋಪ್ಯವಂತಿ ಪುರವಾಸಿನ ಮೇತ್ಯ ವಿಪ್ರಂ ಸಾಂದೀಪಿನಂ ಸಹಿ ಬಲೋ ತತೋಧ್ಯಗೀಷ್ಟ ।
ವೇದಾನ್ ಸಕೃನ್ನಿಗದಿತಾನ್ ಅಖಿಲಾಶ್ಚ ವಿದ್ಯಾಃ ಸಂಪೂರ್ಣ ಸಂವಿದಪಿ ದೈವತ ಶಿಕ್ಷಣಾಯ ॥ ೩ ॥

ಅನ್ವಯಾರ್ಥ: ತತಃ=ಅನಂತರ ಸಂಪೂರ್ಣ ಸಂವಿದಪಿಕೃಷ್ಣಃ=ಕೃಷ್ಣಪರಿಪೂರ್ಣವಾದ ಜ್ಞಾನ ಉಳ್ಳವನಾದರೂ ಶ್ರೀಕೃಷ್ಣನು. ಸಾಂದೀಪಿನಂ=ಸಾಂದೀಪಿ ನಾಮಕನಾದ ವಿಪ್ರಂ=ಬ್ರಾಹ್ಮಣನನ್ನು ಏತ್ಯ=ಹೊಂದಿ ತತಃ=ಆ ಸಾಂದೀಪಿನಿಯಿಂದ ಸಕೃನ್ನಿಗದಿ ತಾನ್=ಒಮ್ಮೆಲೇ ಹೇಳಲ್ಪಟ್ಟ ವೇದಾನ್=ವೇದಗಳನ್ನು ಅಖಿಲಾಶ್ಚ ವಿದ್ಯಾಃ=ಎಲ್ಲಾ ವಿದ್ಯೆಗಳನ್ನೂ ದೈವತ ಶಿಕ್ಷಣಾಯ=ದೇವದೆಗಳಿಗೆ ಕಲಿಸುವುದಕ್ಕೋಸ್ಕರ ಅಧ್ಯಗೀಷ್ಟ=ಅಧ್ಯಯನ ಮಾಡಿದನು. ॥ ೩ ॥

ಧರ್ಮೋಹಿ ಸರ್ವವಿದುಷಾಮಪಿ ದೈವತಾನಾಂ ಪ್ರಾಪ್ತೇ, ನರೇಷು ಜನನೇ ನರವತ್ಪ್ರವೃತ್ತಿಃ ।
ಜ್ಞಾನಾದಿಗೂಹನ ಮುತಾಧ್ಯನಾಯನಾಧಿರತ್ರ ತಜ್ಞಾಪನಾರ್ಥ ಮವಸದ್ಭಗವಾನ್ ಗುರೌಚ ॥ ೪ ॥

ಅನ್ವಯಾರ್ಥ: ಸರ್ವವಿದುಷಾಮಪಿ=ಎಲ್ಲವನ್ನು ತಿಳಿದವರಾದವರಿಗೂ ದೈವತಾನಾಂ=ದೇವತೆಗಳಿಗೆ ನರೇಷು=ಮನುಷ್ಯರಲ್ಲಿ ಜನನೇ=ಹುಟ್ಟು ಪ್ರಾಪ್ತೇಸತಿ=ಬರಲು ನರವತ್ಪ್ರವೃತ್ತಿಃ=ಮನುಷ್ಯರಂತೆ ನೆಡವಳಿಕೆಯು ಜ್ಞಾನಾದಿಗೂಹನಂ=ಜ್ಞಾನ ಬಲ ಮುಂತಾದವುಗಳನ್ನು ಅಡಗಿಸುವುದು ಉತ = ಹಾಗೆ ಅಧ್ಯಯನಾದಿಃ=ವೇದಾಧ್ಯಯನ. ವರ್ಣಾಶ್ರಮೋಚಿತ ಕರ್ಮಾಚರಣೆ ಇತ್ಯಾದಿಗಳು. ಧರ್ಮೋಹಿ=ಯಾವ ಕಾರಣದಿಂದ ಧರ್ಮವೋ ತತ್=ಆದ್ದರಿಂದ ಜ್ಞಾಪನಾರ್ಥಂ=ಅವತಾರ ಪುರುಷರಿಗೆ ಧರ್ಮವನ್ನು ತಿಳಿಸುವುದಕ್ಕೋಸ್ಕರ ಭಗವಾನ್ ಚ=ಶ್ರೀಕೃಷ್ಣನೂ ಕೂಡ ಗುರೌ=ಗುರುಗಳಆಶ್ರಯದಲ್ಲಿ ಅವಸತ್=ವಾಸಿಸಿದನು. ॥ ೪ ॥

ಗುರರ್ಥಮೇಷಮೃತ ಪುತ್ರಮುದಾತ್ಮನಶ್ಚ ರಾಮೇಣ ಸಾರ್ಧಮುಗಮನ್ಮಧುರಾಂ ರಮೇಶಃ ।
ಪೌರೈಃ ಸ ಜಾನಪದ ಬಂಧುಜನೈರಜಸ್ರಂ ಅಭ್ಯರ್ಚಿತೋ ನ್ಯವಸದಿಷ್ಟಕೃದಾತ್ಮಪಿತ್ರೋಃ ॥ ೫ ॥

ಅನ್ವಯಾರ್ಥಃ ಏಷಃ=ಈ ಶ್ರೀಕೃಷ್ಣನು ಗುರ್ವರ್ಥಂ=ಗುರುಗಳಿಗೋಸ್ಕರ ಮೃತಪುತ್ರಂ=ಸತ್ತಮಂಗನನ್ನುಅದಾತ್=ಕೊಟ್ಟನು. (ದಕ್ಷಿಣಾ ರೂಪದಲ್ಲಿ) ರಾಮೇಣ=ಬಲರಾಮನಿಂದ ಸಾರ್ಧಂ=ಕೂಡಿಕೊಂಡು ರಮೇಶಃ=ಶ್ರೀ ಕೃಷ್ಣನಂ ಮಧುರಾಂ=ಮಧುರಾ ಪಟ್ಟಣವನ್ನು ಪುನಶ್ಚ = ತಿರುಗಿ ಅಗಮತ್=ಹೋದನು. ಸಜಾನಪದ ಬಂಧುಜನೈಃ=ದೇಶದ ಜನರಂ ಬಂಧು ಜನರು ಇವರಿಂದ ಕೂಡಿದ ಪೌರೈಃ=ಪಟ್ಟಣದ ಜನರಿಂದ ಅಭ್ಯರ್ಚಿತಃಪೂಜಿಸಲ್ಪಟ್ಟವನಾಗಿ ಆತ್ಮಪಿತ್ರೋಃ=ತನ್ನ ತಂದೆತಾಯಿಯವರಿಗೆ ಇಷ್ಟಕೃತ್=ಅಭೀಷ್ಟವಾದದ್ದನ್ನು ಮಾಡುವವನಾಗಿ ಅಜಸ್ರಂ=ನಿರಂತರವಾಗಿ ನ್ಯವಸತ್=ವಾಸ ಮಾಡಿದನು. ॥ ೫ ॥

ಸರ್ವೇಽಪಿ ತೇ ಪತಿಮವಾಪ್ಯ ಹರಿಪುರಾಹಿ ತಪ್ತಾ ಹಿ ಭೋಜಪತಿನಾ ಮುಮುದರ್ನಿ ತಾಂತವಮ್ ।
ಕಿಂ ವಾಚ್ಯಮತ್ರ ಸುತಮಾಪ್ಯ ಹರಿಂಸ್ವಪಿತ್ರೋಃ ಯತ್ರಾಖಿಲಸ್ಯ ಸುಜನಸ್ಯ ಬಭೂವ ಮೋದಃ ॥ ೬ ॥

ಅನ್ವಯಾರ್ಥ: ತೇಸರ್ವೇಪಿ=ಆ ಎಲ್ಲಾ ಮಧುರಾ ಪಟ್ಟಣಿಗರು ಹಿ=ಯಾವ ಕಾರಣದಿಂದ ಪೂರ್ವಂ=ಹಿಂದೆ ಭೋಜಪತಿನಾ=ಕಂಸನಿಂದ ತಪ್ತಾಃ=ಸಂತಾಪವನ್ನು ಹೊಂದಿದ್ದರೋ ತತಃ=ಆ ಕಾರಣದಿಂದ ಹರಿಂ=ಶ್ರೀಕೃಷ್ಣನನ್ನು ಪತಿಂ=ಸ್ವಾಮಿಯನ್ನಾಗಿ ಅವಾಪ್ಯ=ಹೊಂದಿ ನಿತಾಂತು=ಚೆನ್ನಾಗಿ ಮುಮುದುಃ=ಸಂತೋಷಪಟ್ಟರು. ಯತ್ರ = ಯಾವಾಗ ಅಖಿಲ ಸುಜನಸ್ಯ = ಎಲ್ಲಾ ಸಜ್ಜನರಿಗೂ ಮೋದಃ = ಸಂತೊಷವು ಬಭೂವ=ಆಯಿತೋ ತದಾ=ಆಗ ಹರಿಂ=ಶ್ರೀಕೃಷ್ಣನನ್ನು ಸುತಂ=ಮಗನನ್ನಾಗಿ ಅವಾಪ್ಯ = ಹೊಂದಿ ಆತ್ಮಪಿತ್ರೋಃ=ಹರಿಯ ತಂದೆ ತಾಯಿಯರಾದ ದೇವಕಿ ವಸುದೇವರಿಗೆ ಮೋದಃ ಬಭೂವೇತಿ=ಸಂತೋಷವಾಯಿತು. ಎಂಬುದನ್ನು ಏನಂ ಕಿಂವಾಚ್ಯಂ=ಏನು ಹೇಳತಕ್ಕದ್ದು. ॥ ೬ ॥

ಕೃಷ್ಣಾಶ್ರಯೋ ವಸತಿ ಯತ್ರ ಜನೋಪಿ ತತ್ರವೃದ್ಧಿರ್ ಭವೇತ್ ಕಿಮುರಮಾಧಿಪತೇರ್ನಿವಾಸೆ ।
ವೃಂದಾವನಂ ಯುದಧಿವಾತಕ್ ಆಸ ಸದೃಙ ಮಾಹೇಂದ್ರ ಸದ್ಮಸದೃಶಂ ಕಿಮು ತತ್ರ ಪುರ್ಯಾಂ ॥ ೭ ॥

ಅನ್ವಯಾರ್ಥ: ಯತ್ರ=ಯಾವ ಪ್ರದೇಶದಲ್ಲಿ ಕೃಷ್ಣಾಶ್ರಯಃಜನಃ=ಕೃಷ್ಣನೇ ಆಶ್ರಯವಾಗಿ ಉಳ್ಳ ಜನರು ವಸತಿ=ವಾಸಿಸುತ್ತಾರೋ ತತ್ರ ಅಪಿ=ಆ ಪ್ರದೇಶದಲ್ಲಿಯೂ ಕೂಡ ವೃದ್ಧಿಃ=ಎಲ್ಲಾ ಸಂಪತ್ತಿನ ವೃದ್ಧಿಯು ಭವೇತ್=ಆಗುವುದು. ರಮಾಧಿಪತೇಃ = ಸಂಪದಭಿಮಾನಿನಿಯಾದ ಲಕ್ಷ್ಮೀಪತಿಯಾದ ಶ್ರೀಕೃಷ್ಣನ ನಿವಾಸೇ=ವಾಸಸ್ಥಾನದಲ್ಲಿ ಕಿಮು = ಸಂಪತ್ತಿನ ಅಭಿವೃದ್ಧಿ

ವಿನಂ ಹೇಳತಕ್ಕದಂ. ವೃಂದಾಪನಂ=ವೃಂದಾವನವು ಯುದಧಿವಾಸತಃ=ಯಾವ ಕೃಷ್ಣನ ಅವಾಸದಿಂದ ಸಧ್ರ್ಯಕ್=ಚೆನ್ನಾಗಿ ಮಾಹೇಂದ್ರ ಸದ್ಮಸದೃಶಂ=ಇಂದ್ರನ ಅಮರಾವತಿಯಂತೆ ಸಮೃದ್ಧಿ ಉಳ್ಳದ್ದು. ಅಸ=ಆಯಿತು. ತತ್ರ=ಅದಾವ ಕೃಷ್ಣನು ರಾಜನಾಗಿ ಉಳ್ಳ ಪ್ರಯರ್ಹಾಂ=ಮಧುರಾ ಪಟ್ಟಣದಲ್ಲಿ ಕಿವಂಃ=ಸಂಪತ್ತು ತುಂಬಿ ತುಳುಕುತ್ತಿತ್ತೆಂದೂ ವಿನಂ ಹೇಳ ತಕ್ಕದ್ದು. ॥ ೭ ॥

ಯೇನಾಧಿವಾಸಮೃಷಭೋ ಜಗತಾಂ ವಿಧತ್ತೆ ವಿಷ್ಣುಸ್ತತೋ ಹಿವರತಾ ಸದನೇ ವಿಧಾತುಃ ।
ತಸ್ಮಾತ್ ಪ್ರಭೋರ್ನಿವಸನಾತ್ ಮಧುರಾಪುರೀಸಾಶಶ್ವತ್ಸಮೃದ್ಧಜನಸಂಕುಲಿತಾ ಬಭೂವ ॥ ೮ ॥

ಅನ್ವಃ- ಯೇನ=ಯಾವ ಕಾರಣದಿಂದ ಜಗತಾಂ=ಜಗತ್ತಿನಲ್ಲಿರುವವರಿಗೆ ಋಷಭಃ=ಶ್ರೇಷ್ಠನಾದ ವಿಷ್ಣುಃ=ಶ್ರೀವಿಷ್ಣುವು ವಿಧಾತುಃ=ಬೊಮ್ಮನ ಸದನೇ=ಪಟ್ಟಣದಲ್ಲಿ ಅಧಿವಾಸಂವಿಧತ್ತೆ=ಮುಖ್ಯವಾಗಿ ಆವಾಸವನ್ನು ಮಾಡುತ್ತಾನೋ ತೇನ=ಆ ಕಾರಣದಿಂದ ವರತಾ=ಸತ್ಯಲೋಕಕ್ಕೆ ಕೈಲಾಸಾದಿಗಳಿಂದ ಶ್ರೇಷ್ಠತ್ವವು ಬಂದಿದೆ ತಸ್ಮಾತ್=ಆದ್ದರಿಂದ (ಭಗವಂತನು ಇಷ್ಟ ಮಹಿಮಾಪೂರ್ಣನಾದ್ದರಿಂದ) ಪ್ರಭೋಃ=ಜಗದೊಡೆಯ ಶ್ರೀಕೃಷ್ಣನ ನಿವಸನಾತ್=ಆವಾಸದಿಂದ ಮಧುರಾಪುರೀ=ಮಧುರಾ ಪಟ್ಟಣವು ಶಶ್ವತ್ = ಯಾವಾಗಲೂ ಸಮೃದ್ಧಜನಸಂಕುಲಿತಾ ಬಭೂವ=ಪುಷ್ಕಳಜನ ಉಳ್ಳದ್ದಾಯಿತಂ. ॥ ೮ ॥

ರಕ್ಷತ್ಯಜೇತ್ರಿ ಜಗತಾಂ ಪರಿರಕ್ಷಕೇಸ್ಮಿನ್ ಸರ್ವಾನ್ಯದೂನ್ ಮಗಧರಾಜಸುತೇ ಸ್ವಭರ್ತುಃ ।
ಕೃಷ್ಣಾನ್ಮೃತಿಂ ಪಿತುರವಾಪ್ಯ ಸವಿೂಪ ಮುಸ್ತಿ ಪ್ರಾಸ್ತೀ ಶಂಶಸತುರತೀವ ಚ ದುಃಖಿತೇಸ್ಮೈ ॥ ೯ ॥

ಅನ್ವಃ- ಅಸ್ಮಿನ್=ಈ ಈ ಭೂಲೋಕದಲ್ಲಿ ತ್ರಿಜಗತಾಂ=ಮೂರು ಲೋಕಕ್ಕೆ ಪರಿರಕ್ಷಕೇ=ರಕ್ಷಕನಾದ ಅಜೇ= ಹುಟ್ಟಿಲ್ಲದ ಶ್ರೀಕೃಷ್ಣನಂ ಸರ್ವಾನ್=ಎಲ್ಲಾ ಯದೂನ್=ಯದುಗಳನ್ನು ರಕ್ಷತಿಸತಿ = ರಕ್ಷಿಸುತ್ತಿರಲು ಮಗಧರಾಜಸುತೇ=ಜರಾಸಂಧನ ಮಕ್ಕಳಾದ ಅತೀವ ದುಃಖಿತೇ = ಬಹಳ ದುಃಖ ಮಗ್ನರಾದ (ವೈಧವ್ಯದಿಂದಾಗಿ) ಅಸ್ತಿ ಪ್ರಾಸ್ತೀ=ಅಸ್ತಿ ಪ್ರಾಸ್ತೀ ಎಂಬ ಹೆಸರುಳ್ಳ ಕಂಸನ ದಯಿತೆಯರಂ ಪಿತುಃ=ತಂದೆಯಾದ ಜರಾಸಂಧನ ಸವಿೂಪಂ=ಹತ್ತಿರವನ್ನು ಅವಾಪ್ಯ=ಹೊಂದಿ ಸ್ವಭರ್ತುಃ=ತಮ್ಮ ಗಂಡನಾದ ಕಂಸನ ಕೃಷ್ಣಾತ್ಮೃತಿಂ=ಕೃಷ್ಣನಿಂದ ಉಂಟಾದ ಮರಣವನ್ನು ಅಸ್ಮೈ=ತಂದೆಗೆ ಶಶಂಸತುಃ=ಹೇಳಿದರು. ॥ ೯ ॥

ಶ್ರುತ್ವೈವ ತನ್ಮಗಧರಾಜ ಉರುಪ್ರೂಢ ಬಾಹ್ವೋರ್ಬಲೇನ ನಜಿತೋ ಯುಧಿಸರ್ವಲೋಕೈಃ ।
ಬ್ರಹ್ಮೇಶ ಚಂಡಮುನಿ ದತ್ತವರೈರಜೇಯೋ ಮೃತ್ಯೂಜ್ಝಿತಶ್ಚ ವಿಜಯೀಜಗತುಶ್ಚ ಕೋಪ ॥ ೧೦ ॥

ಅನ್ವಃ- ಮಗಧರಾಜಃ=ಜರಾಸಂಧನು ತತ್ ಶ್ರುತ್ವಾ=ತನ್ನ ಮಕ್ಕಳು ಹೇಳಿದ ಮಾತು ಕೇಳಿ ಚುಕೋಪ=ಕೋಪಗೊಂಡನಂ. ಜರಾಸಂಧ ಯಾವ ರೀತಿಯ ಪರಾಕ್ರಮ ಉಳ್ಳವನೆಂದರೆ ಅತಿ ಪ್ರರೂಢ ಬಾಹ್ವೋರ್ಬಲೇನ=ಅತ್ಯಂತ ಬೆಳೆದಿರುವ ಬಾಹುಗಳ ಸಾಮರ್ಥ್ಯದಿಂದ ಸರ್ವಲೋಕೈಃ=ಎಲ್ಲಾ ಜನರಿಂದ ಯುಧಿ=ಯುದ್ಧದಲ್ಲಿ ನಜಿತಃ = ಗೆಲ್ಲಲ್ಪಡದ ಬ್ರಹ್ಮೇಶ ಚಂಡಮುನಿ ದತ್ತವರೈಃ=ಬೊಮ್ಮ ಈಶ ದುರ್ವಾಸ ಮುನಿವರರಿಂದ ಕೊಡಲ್ಪಟ್ಟ ವರದಿಂದಾಗಿ ಜಗತಃ= ಜಗತ್ತಲ್ಲಿರುವರೆಲ್ಲರಿಂದಲೂ ಮೃತ್ಯೂಜ್ಝಿತಃ=ಮರಣವಿಲ್ಲದವನು ಆದ್ದರಿಂದ ವಿಜಯೀ=ಸದಾ ಜಯ ಉಳ್ಳವನಾಗಿದ್ದ ಇಂತಪ ಮಗಧರಾಜನು ಚುಕೋಪ=ಕೋಪಗೊಂಡನಂ. ॥ ೧೦ ॥

ಕ್ಷುಬ್ಧೋತಿ ಕೋಪವಶತಃ ಸ ಗದಾಮು ಮೋಘಾಂ ದತ್ತಾಂ ಶಿವೇನ ಜಗೃಹೇಶಿವ ಭಕ್ತವಂದ್ಯಃ ।
ಶೈವಾಗಮಾಖಿಲವಿದತ್ರಚ ಸುಸ್ಥಿರೋ ಸೌ ಚಿಕ್ಷೇಪಯೋಜನಶತಂ ಸ ತು ತಾಂ ಪರಸ್ಮೈ ॥ ೧೧ ॥

ಅನ್ವಃ- ಅತಿ ಕೋಪವಶತಃ=ಬಹಳವಾದ ಕೋಪದ ಪರವಶತೆಯಿಂದಾಗಿ ಕ್ಷುಬ್ಧಃ=ಕ್ಷೋಭೆಗೊಂಡ ಕಳವಳಗೊಂಡ ಶೈವಾಗಮಾಖಿಲವಿತ್=ಸಮಸ್ತಶೈವ ಶಾಸ್ತ್ರಸಂಪನ್ನನಾದ ಶಿವಭಕ್ತವಂದ್ಯಃ=ಶೈವರಿಂದ ನಮಸ್ಕರಿಸಲ್ಪಟ್ಟ ಅಸೌ = ಈ ಜರಾಸಂಧನು ಅತ್ರೈವ=ಈ ತನ್ನ ಮಗಧದಲ್ಲಿಯೇ ಸುಸ್ಥಿತಸ್ಸನ್=ಇದ್ದವನಾಗಿ ಅಮೋಘಾಂ=ವ್ಯರ್ಥವಾಗದ ಶಿವೇನ ದತ್ತಾಂ= ರುದ್ರನಿಂದ ಕೊಡಲ್ಪಟ್ಟ ತಾಂ=ಗದಾಂ=ಆ ಗದೆಯನ್ನು ಯೋಜನಶತಂ=ಶತಯೋಜನ ದೂರಕ್ಕೆ ಪರಸ್ಮೈ=ಸರ್ವೋತ್ತಮನಾದ ಶ್ರೀ ಕೃಷ್ಣನಿಗೆ ಚಿಕ್ಷೇಪ=ಬಿಸಾಡಿದನಂ. ॥ ೧೧ ॥

ಅವರ್ಮಾಕ್ ಪಪಾತ ಚ ಗದಾಮಧುರಾಪ್ರದೇಶಾತ್ ಸಾಯೋಜನೇನ ಯದಿಮಂ ಪ್ರಜಗಾದ ಪೃಷ್ಟಃ ।
ಏಕೊತ್ತರಾಮಪಿಶತಾಚ್ಛತಯೋಜನೇತಿ ದೇವರ್ಷಿರತ್ರ ಮಧುರಾಂ ಭಗವತ್ಪ್ರಿಯಾರ್ಥೇಂ ॥ ೧೨ ॥

ಸಾಗದಾ=ಆ ಜರಾಸಂಧನಿಂದ ಬಿಸಾಡಲ್ಪಟ್ಟ ಗದೆಯು ಮಧುರಾ ಪ್ರದೇಶಾತ್=ಮಧುರಾ ದೇಶಕ್ಕಿಂತ ಯೋಜನೇನ=ಒಂದು ಯೋಜನ ಅರ್ವಾಕ್=ಹಿಂದೆ ಪಪಾತ=ಬಿದ್ದಿತು. ಯತ್=ಯಾವ ಕಾರಣದಿಂದ ಪೃಷ್ಟಃ=ಜರಾಸಂಧನಿಂದ ಇಲ್ಲಿಂದ ಮಧುರಾ ಪಟ್ಟಣ ಎಷ್ಟು ಯೋಜನ ಎಂದು ಕೇಳಲ್ಪಟ್ಟ ದೇವರ್ಷಿ=ದೇವಮುನಿಯಾದ ನಾರದರು ಶತಾತ್=ಒಂದು ನೂರು ಯೋಜನಕ್ಕಿಂತ ಏಕೋತ್ತರಾಮಪಿ=ಒಂದು ಯೋಜನ ಹೆಚ್ಚು ದೂರ ಉಳ್ಳದಾದರೂ ಕೂಡ ಮಧುರಾಂ=ಮಧುರಾ ಪಟ್ಟಣವನ್ನು ಭಗವತ್ಪ್ರಿಯಾರ್ಥೇ ಶ್ರೀಕೃಷ್ಣ ಭಗವಂತನ ಪ್ರೀತಿಗೋಸ್ಕರ ಅತ್ರ=ಈ ನಿನ್ನ ಮಾಗಧ ಪಟ್ಟಣದಿಂದ ಶತ ಯೋಜನೇತಿ=ನೂರು ಯೋಜನ ದೂರವುಳ್ಳದ್ದು ಇತಿ=ಎಂದು ಜರಾಸಂಧನಿಗೆ ಪ್ರಜಗಾದ=ಹೇಳಿದನು. ಆದುದರಿಂದಲೇ ಒಂದು ಯೋಜನ ಹಿಂದೆ ಬಿದ್ದಿತು. ॥ ೧೨ ॥

ಶಕ್ತಸ್ಯ ಚಾಪಿ ಹಿ ಗದಾಪ್ರತಿಘಾತನೇ ತು ಶುಶ್ರೂಷಣಂ ಮದುಚಿತಂ ತ್ವಿತಿ ಚಿಂತಯಾನಃ ।
ವಿಷ್ಣೋರ್ಮುನಿಃ ಸ ನಿಜಗಾದ ಹಿ ಯೋಜನೋನಂ ಮಾರ್ಗಂ ಪುರೋ ಭಗವತೋ ಮಾಗಧೇಶ ಪೃಷ್ಟಃ॥ ೧೩ ॥

ಅನ್ವಯಃ- ಮಾಗಧೇಶ ಪೃಷ್ಟಃ = ಜರಾಸಂಧನಿಂದ ಕೇಳಲ್ಪಟ್ಟ ಸ ಮುನಿಃ=ಆ ನಾರದ ಮುನಿಯು ಗದಾಯಾಃ ಪ್ರತಿಘಾತನೇ= ಗದೆಯನ್ನು ನಾಶ ಮಾಡಲಿಕ್ಕೆ ಶಕ್ತಸ್ಯಾಪಿ=ಸಮರ್ಥನಾದ ವಿಷ್ಣೋಃ=ಶ್ರೀಕೃಷ್ಣನ ಶುಶ್ರೂಷಣಂ=ಸೇವೆಯು (ಗದೆಯ ಪೆಟ್ಟು ಬೀಳದಂತೆ ಮಾಡುವುದು) ಮದುಚಿತಂ=ನನ್ನ ಕರ್ತವ್ಯವು. ಇತಿ=ಎಂಬುದಾಗಿ ಚಿಂತಯಾನಃ=ಆಲೋಚನೆ ಮಾಡತಕ್ಕವನಾಗಿ ಭಗವತೇಃ ಪುರ=ಶ್ರೀಕೃಷ್ಣನ ಪಟ್ಟಣಕ್ಕಿಂತ ಯೋಜನೋನಂ=ಒಂದು ಯೋಜನಕಮ್ಮಿಯಾದ ಮಾರ್ಗಂ=ದಾರಿಯನ್ನು ಜಗಾದ=ಹೇಳಿದನು. ಅದ್ದರಿಂದ ಹಿಂದೆ ಬಿತ್ತು ಎಂಬುದಾಗಿ ಅನ್ವಯವು. ॥ ೧೩ ॥

ಕ್ಷಿಪ್ತಾತು ಸಾ ಭಗವತೋಽಥ ಗದಾ ಜರಾಖ್ಯಾಂ ತತ್ಸಂಧಿನೀ ಮಸುಭಿರಾಶು ವಿಯೋಜ್ಯಪಾಪಾಂ ॥
ಮರ್ತ್ಯಾರ್ಶನೀಂ ಭಗವತಃ ಪುನರಾಜ್ಞಯೈವ ಯಾತಾ ಗಿರೀಶ ಸದನಂನಾ ಮಾಗಧಂ ವಿಸೃಜ್ಯ ॥ ೧೪ ॥

ಅನ್ವಯಃ- ಅಥ=ನಾರದರ ವಚನದ ನಂತರ ಭಗವತಃ ಅರ್ಥೇ=ಶ್ರೀಹರಿಯ ಕಾರಣದಿಂದಾಗಿ ಕ್ಷಿಪ್ತಾ=ಎಸೆಯಲ್ಪಟ್ಟ ಸಾಗದಾ=ಆ ಗದೆಯು ತತ್ಸಂಧಿನೀಂ=ಎರಡು ತುಂಡಾದ ಜರಾಸಂಧನನ್ನು ಕೂಡಿಸಿರುವ ಮರ್ತ್ಯಾರ್ಶನೀಂ = ಮನುಷ್ಯರನ್ನು ತಿನ್ನುವ ಶೀಲ ಉಳ್ಳ ಪಾಪಾಂ=ಪಾಪಿಷ್ಠೆಯಾದ ಜರಾಖ್ಯಾಂ = ಜರಾನಾಮಕ ರಾಕ್ಷಸಿಯನ್ನು ಅಸುಭಿಃ=ಪ್ರಾಣಗಳಿಂದ ವಿಯೋಜ್ಯ=ಬಿಡಿಸಿ (ಕೊಂದು) ಮಾಗಧಂ ವಿಸೃಜ್ಯ=ಜರಾಸಂಧನನ್ನು ಬಿಟ್ಟು ಭಗವತಃ=ಪೂಜ್ಯನಾದ ರುದ್ರನ ಆಜ್ಞಯೈವ= ಅಪ್ಪಣೆಯಂತೆ ಪುನಃ = ತಿರುಗಿ ಗಿರೀಶಸದನಂ=ಯಾತಾರುದ್ರನಿಕೇತನವನ್ನು ಹೊಂದಿತು. ॥ ೧೪ ॥

ರಾಜಾ ಸಮಾತೃತ ಉತೋ ಗದಯಾ ಚ ಹೀನಃ ಕ್ರೋಧಾತ್ ಸಮಸ್ತನೃಪತೀನ ಭಿಸನ್ನಿಪಾತ್ಯ ।
ಅಕ್ಷೌಹಿಣೀತ್ರ್ಯಧಿಕ ವಿಂಶಯುತೋತಿವೇಲಂ ದರ್ಪೋದ್ಧತಃ ಸಪದಿ ಕೃಷ್ಣಪುರೀಂ ಜಗಾಮ ॥ ೧೫ ॥

ಅನ್ವಯಃ- ಸ್ವಮಾತೃತಃ=ತನ್ನ ತಾಯಿಯಿಂದ ಉತ=ಮತ್ತು ಗದಯಾಚ=ಗದೆಯಿಂದಲೂ ಹೀನ=ರಹಿತನಾದ ರಾಜಾ= ಮಾಗಧ ರಾಜನು ಕ್ರೋಧಾತ್=ಕೋಪದಿಂದ ಸಮಸ್ತ ನೃಪತೀನ್=ಎಲ್ಲಾ ತನ್ನ ಕೆಳಗಿನ ರಾಜರನ್ನು ಅಭಿಸನ್ನಿಪಾತ್ಯ = ಕೂಡಿ ಹಾಕಿಕೊಂಡು ಅಕ್ಷೌಹಿಣೀತ್ರ್ಯಧಿಕ ವಿಂಶಯುತಃಸನ್=ಇಪತ್ಮೂರು ಅಕ್ಷೌಹಿಣಿಯಿಂದ ಕೂಡಿದವನಾಗಿ ಅತಿವೇಲಂ = ಬಹಳವಾಗಿ ದರ್ಪೋದ್ಧತಃಸನ್=ಕೋಪಗೊಂಡವನಾಗಿ ಸಪದಿ=ಕೂಡಲೇ ಕೃಷ್ಣಪುರೀಂ=ಮಧುರಾಪಟ್ಟಣಕ್ಕೆ ಜಗಾಮ= ಹೋದನು. ॥ ೧೫ ॥

ಸರ್ವಾಂಪುರೀಂ ಪ್ರತಿನಿರ್ಭಧ್ಯ ದಿದೇಶವಿಂದವಿದುನುಜೌ ಭಗವತಃ ಕುಮತಿ ಸ ದೂತೌ ।
ಊಚತುರ್ಭಗವತೇಸ್ಯ ವಚೋತಿದರ್ಪಪೂರ್ಣಂ ತಥಾ ಭಗವತೋ ಪ್ಯಪಹಾಸಯುಕ್ತಮ್ ॥ ೧೬ ॥

ಅನ್ವಃ:- ಸಃ = ಆ ಜರಾಸಂಧನು ಸರ್ವಾಂ ಪುರೀಂ ಪ್ರತಿರುನಿಷಿಧ್ಯ = ಮಧುರಾ ಪಟ್ಟಣವನ್ನು ಎಲ್ಲಾ ಕಡೆ ತಡೆದು ವಿಂದವಿಂದಾನುಜೌ = ವಿಂದ ಹಾಗೂ ಅವನ ತಮ್ಮನಾದ ಅನುವಿಂದರನ್ನು ದೂತೈಃ = ದೂತರನ್ನು ಭಗವತಃ ಸಕಾಶಂ= ಶ್ರೀಕೃಷ್ಣನ ಸಮೀಪಕ್ಕೆ ದಿದೇಶ = ಕಳಿಸಿದನು ತೌ = ಆ ವಿಂದಾನುವಿಂದರು ಅತಿದರ್ಪಪೂರ್ಣಂ = ಅತ್ಯಂತ ಅಹಂಕಾರ ದಿಂದ ಕೂಡಿದ ಭಗವತೋಪ್ಯಪಹಾಸಯುಕ್ತಂ = ಶ್ರೀಕೃಷ್ಣನಿಗೂ ತಮಾಷೆ ಮಾಡತಕ್ಕ ವಚಃ = ಮಾತನ್ನು ಅಸ್ಯ ಭಗ ವತಃ = ನಾಶರಹಿತನಾದ ಶ್ರೀಕೃಷ್ಣನಿಗೆ ಊಚತುಃ =ಹೇಳಿದರು. ॥ ೧೬ ॥

ಲೋಕೇಪ್ರತೀತ ಬಲಪೌರುಷಸಾರರೂಪಸ್ತ್ವಂ ಹ್ಯೇಕ ಏಷ್ಯಭವತೋ ಬಲವೀರ್ಯಸಾರಂ ।
ಜ್ಞಾತ್ವಾಸುತೇನತುಮಯಾ ಪ್ರತಿಪಾದಿತೇ ಹಿ ಕಂಸಸ್ಯವೀರ್ಯರಹಿತೇನ ಹತಸ್ತ್ವಯಾ ಸಃ ॥ ೧೭ ॥

ಅನ್ವಃ:- ಲೋಕೇ=ಲೋಕದಲ್ಲಿ ಅಪ್ರತೀತಬಲ ಪೌರುಷಸಾರ ರೂಪಃ=ಅಪ್ರಸಿದ್ಧಗಳಾದ ಬಲ ಮತ್ತು ಸಾಮರ್ಥ್ಯ ಇವುಗಳಿಂದ ಶ್ರೇಷ್ಠವಾದ ಸ್ವರೂಪವುಳ್ಳ ತ್ವಂ ಏಕ ಏವ ಹಿ ಪ್ರಸಿದ್ಧಃ=ನಿನ್ನೊಬ್ಬನೇ ಪ್ರಸಿದ್ಧನಷ್ಟೆ ಆದ್ದರಿಂದ ವೀರ್ಯ ರಹಿತೇನ ಮಯಾ=ಸಾಮರ್ಥ್ಯವಿಲ್ಲದ ನನ್ನಿಂದ ವಿಷ್ಯಭವತಃ=ಮುಂದೆ ಬರತಕ್ಕ ತವ=ನಿನ್ನ ಬಲವೀರ್ಯಸಾರಂ = ಬಲ ಪರಾಕ್ರಮ ಇವುಗಳನ್ನ ಅವಿಜ್ಞಾಯ=ತಿಳಿಯದೇ ಸುತೇ=ನನ್ನೀರ್ವರು ಮಕ್ಕಳು ಕಂಸಸ್ಯ=ಕಂಸನಿಗೆ ಪ್ರತಿಪಾದಿತೇ= ಕೊಡಲ್ಪಟ್ಟರು. ಅತಃ = ಆದ್ದರಿಂದ ತ್ವಯಾ=ನಿನ್ನಿಂದ ಸಃ = ಆ ಕಂಸನು ಹತಃ=ಕೊಲ್ಲಲ್ಪಟ್ಟನು. ॥ ೧೭ ॥

ಸೋಹಂ ಹಿ ದುರ್ಬಲತಮೋಬಲಿನಾಂ ವರಿಷ್ಠಂ ಕೃತ್ವೈವ ದೃಷ್ಟಿವಿಷಯಂ ವಿಗತಃ ಪ್ರತಾಪಃ ।
ಯಾಸ್ಯೇತಪೋವನಮಥೋಸಹಿತಃ ಸುತಾಭ್ಯಾಂ ಕ್ಷಿಪ್ರಂ ಮಮಾಸ್ಯವಿಷಯೋಭವ ಚಕ್ಷುಷೋತಃ॥೧೮॥

ಅನ್ವಃ- ದುರ್ಬಲತಮಃ=ಅತ್ಯಂತ ಅಶಕ್ತನಾದ ಸೋಹಂ=ಆ, ಇದಾನೀ ನಾನಂ ಬಲಿನಾಂ ವರಿಷ್ಠಂತ್ವಾಂ=ಶಕ್ತಿವಂತರರಲ್ಲಿ ಉತ್ತಮನಾದ ನಿನ್ನನ್ನು ದೃಷ್ಟಿವಿಷಯಂ=ಕಣ್ಣಿಗೆ ಗೋಚರನನ್ನಾಗಿ ಕೃತ್ವಾ ಏವ=ಮಾಡಿಕೊಂಡು ವಿಗತಪ್ರತಾಪಃ ಸನ್= ನಾಶಿತವಾದ ಪರಾಕ್ರಮ ಉಳ್ಳವನಾಗಿ ಅಥ=ಅನಂತರ ಸುತಾಭ್ಯಾಂ=ಮಕ್ಕಳಿಂದ (ಅಸ್ತಿಪ್ರಾಸ್ತಿಯರಿಂದ) ಸಹಿತಃಸನ್= ಕೂಡಿದವನಾಗಿ ತಪೋವನಂ=ತಪೋವನವೆಂದು ಪ್ರಸಿದ್ಧವಾದ ಪ್ರದೇಶವನ್ನು ಯಾಸ್ಯೇ=ಹೋಗುತ್ತೇನೆ ಅತಃ= ಆದ್ದ ರಿಂದ ಅದ್ಯ=ಇಂದು ಮಮ=ನನ್ನ ಚಕ್ಷುಷಃ ಕಣ್ಣಿಗೆ ವಿಷಯಃ = ಕಾಣತಕ್ಕವನು ಭವ=ಆಗು ॥ ೧೮ ॥

ಸಾಕ್ಷೇಪವೀರಿತವಿಷಂ ಬಲದರ್ಪ ಪೂರ್ಣಂ ಆತಾಪಹಾಸ ಸಹಿತಂ ಭಗವಾನ್ನಿಶಮ್ಯ ।
ಸತ್ಯಂ ತದಿತ್ಯುರುವಚೋರ್ಥವದಭ್ಯುದೀರ್ಯ ಮುಂದಂಪ್ರಹಸ್ಯ ನಿರಗಾತ್ಸಹಿತೋ ಬಲೇನ ॥ ೧೯ ॥

ಅನ್ವಃ ಸಾಕ್ಷೇಪಂ=ತಿರಸ್ಕಾರದಿಂದ ಕೂಡಿದ್ದಾಗಿ ಈರಿತಂ=ಹೇಳಲ್ಪಟ್ಟ ಆತ್ಮಾಪಹಾಸ ಸಹಿತಂ=ತನ್ನನ್ನೂ ಅಪಹಾಸ್ಯಕ್ಕೆ ಗುರಿಮಾಡತಕ್ಕ ಬಲದರ್ಪಪೂರ್ಣಂ=ಬಲವಾದ ಅಹಂಭಾವದಿಂದ ಕೂಡಿದ ವಚಃ=ಮಾತನ್ನು ಭಗವಾನ್=ಪೂಜ್ಯ (ಷಡ್ಗುಣ ಸಂಪನ್ನನಾದ) ಶ್ರೀಕೃಷ್ಣನಂ ನಿಶಮ್ಯ=ಕೇಳಿ ಸತ್ಯಂ ತತ್=ನೀವು ಹೇಳಿದ್ದು ಸರಿ ಇತಿ=ಎಂಬುದಾಗಿ ಅರ್ಥವತ್ ಉರು ವಚಃ=ಅರ್ಥ ತುಂಬಿದ ಶೋಭನ ಮಾತನ್ನು ಅಭ್ಯುದೀರ್ಯ=ಪೇಳಿ ಮುದಂ=ಮೆಲ್ಲನೆ ಪ್ರಹಸ್ಯ=ನಗಾಡಿ ಬಲೇನ ಸಹಿತಃ ಸನ್=ಬಲರಾಮನಿಂದ ಕೂಡಿಕೊಂಡು ನಿರ್ಗಾತ್=ಪಟ್ಟಣದಿಂದ ಹೋದನು. ॥ ೧೯ ॥

ದ್ವಾರೇಷು ಸಾತ್ಯಕಿಪುರಸ್ಸರಮಾತ್ಮಸೈನ್ಯಂ ನಿಷ್ಪಭ್ಯುದೀರ್ಯಂ ಭಗವಾನ್ ಸ್ವಯಮುತ್ತರೇಣ ।
ರಾಮದ್ವಿತೀಯ ಉಪಗಾನ್ಮಗಧಾಧಿರಾಜಮ್ ಯೋದ್ಧುಂ ನೃಪೇಂದ್ರ ಕಟಕೇನ ಯುತಂ ಪರೇಶಃ ॥೨೦॥

ಅನ್ವಃ- ಪರೇಶ=ಬ್ರಹ್ಮಾದಿಗಳಿಗೂ ಒಡೆಯನಾದ ಶ್ರೀಕೃಷ್ಣನು ತ್ರಿಷು=ಮೂರು ದ್ವಾರೇಷು=ತನ್ನ ಪಟ್ಟಣದಲ್ಲಿ ಸಾತ್ಯಕಿ ಪುರಸ್ಕರಂ=ಸಾತ್ಯಕಿಮುಖಂಡನಾಗಿ ಉಳ್ಳ ಆತ್ಮಸೈನ್ಯಂ=ತನ್ನಸೈನ್ಯವನ್ನು ಅಭ್ಯುದೀರ್ಯ=ಇರುವಂತೆ ಆಜ್ಞಾಪನೆಮಾಡಿ ರಾಮ ದ್ವಿತೀಯಃಸನ್=ರಾಮನಿಂದ ಕೂಡಿಕೊಂಡವನಾಗಿ ನೃಪೇಂದ್ರ ಕಟಕೇನ ಯುತಂ=ರಾಜ ಶ್ರೇಷ್ಠರ ಸಮೂಹದಿಂದ ಕೂಡಿದ ಮಗಧಾಧಿರಾಜಂ = ಜರಾಸಂಧನೊಂದಿಗೆ ಯೋದ್ಧುಂ = ಯುದ್ಧವನ್ನು ಮಾಡಲು ಉದಗಾತ್ = ಹೋದನು. ॥ ೨೦ ॥

ತಸ್ಯೇಚ್ಛಯೈವ ಪೃಥಿವೀಮವತೇರುರಾಶು ತಸ್ಯಾಯುಧಾನಿ ಸಬಲಸ್ಯ ಸುಭಾಸ್ವರಾಣಿ ।
ಶಾರ್ಙ್ಗಾಸಿಚಕ್ರದರತೂಣಗದಾಸ್ವಕೀಯಾಃ ಜಗ್ಮಾಹದಾರುಕ ಗೃಹೀತರಥೇಸ್ಥಿತಃ ಸಃ ॥ ೨೧ ॥

ಅನ್ವಃ:- ತಸ್ಯ=ಅದಾವ ಕೃಷ್ಣಸ್ಯ=ಶ್ರೀಕೃಷ್ಣನ ಇಚ್ಛಯೈವ=ಕೇವಲ ಇಚ್ಛೆಯಿಂದ ಸಬಲಸ್ಯತಸ್ಯ=ಬಲರಾಮನಿಂದ ಕೂಡಿದ ಕೃಷ್ಣನ ಸುಬಾಸ್ವರಾಣಿ=ಒಳ್ಳೆಯ ಶೋಭಿಸತಕ್ಕ ಆಯಧಾನಿ=ಆಯುಧಗಳು ಆಶು=ಬೇಗನ ಪೃಥಿವೀಂ = ಭೂಮಿಯನ್ನು ಅವತೇರುಃ = ಇಳಿದವು ಸಃ=ಆ ಶ್ರೀಕೃಷ್ಣನು ಸ್ವಕೀಯಾಃ=ತನ್ನವುಗಳಾದ ಶಾರ್ಙ್ಗಾಸಿಚಕ್ರದರತೂಣಗದಾಃ=ಶಾರ್ಙ್ಗಧನುಸ್ಸು ಕತ್ತಿ, ಚಕ್ರ ಶಂಖ ಬತ್ತಳಿಗೆ ಗದೆ ಇವುಗಳನ್ನು ದಾರುಕಗೃಹೀತರಥೇ=ದಾರುಕ ಸಾರಥಿಯಾದ ರಥದಲ್ಲಿ ಸ್ಥಿತಃಸನ್=ಕುಳಿತವನಾಗಿ ಜಗ್ರಾಹ=ಸ್ವೀಕರಿಸಿದನು. ॥ ೨೧ ॥

ಆರುಹ್ಯ ಭೂಮಯ ರಥಂ ಪ್ರತಿಯುಕ್ತಮಶ್ವೈರ್ವೇದಾತ್ಮಕೈರ್ಧನುರಧಿಜ್ಯ ಮಥ ಪ್ರಗೃಹ್ಯ ।
ಶಾರ್ಙ್ಗಂಶರಾಂಶ್ಚ ನಿಶಿತಾನ್ ಮಗವಾಧಿರಾಜಮುಗ್ರಂ ನೃಪೇಂದ್ರ ಸಹಿತಂ ಪ್ರಯಯೌ ಜವೇನ ॥೨೨ ॥

ಅನ್ವಃ ಕೃಷ್ಣಃ=ಶ್ರೀಕೃಷ್ಣನು ಭೂಮಯರಥಂ = ಭೂಮಿಯೇ ಅಭಿಮಾನಿನಿಯಾಗಿ ಉಳ್ಳ ರಥವನ್ನು ಆರುಹ್ಯ=ಏರಿ ರಥವನ್ನು ವರ್ಣಿಸುತ್ತಾರೆ ವೇದಾತ್ಮಕೈಃ=ವೇದಸ್ವರೂಪಗಳಾದ ಅಶ್ವೈಃ=ಕುದುರೆಗಳಿಂದ ಪ್ರತಿಯುಕ್ತಂ=ಕೂಡಿದ ಅಧಿಜ್ಯಂ= ಕಟ್ಟಲ್ಪಟ್ಟ ಧನುಃ=ಧನುಸ್ಸನ್ನು ಪ್ರಗೃಹ್ಯ=ಹಿಡಿದುಕೊಂಡು ನಿಶಿತಾನ್=ತೀಕ್ಷ್ಣಗಳೀದ ಶರಾನ್ಚ=ಬಾಣಗಳನ್ನು ಪ್ರಗೃಹ್ಯ=ಹಿಡಿದುಕೊಂಡು ಉಗ್ರಂ=ಕ್ರೂರನಾದ ನೃಪೇಂದ್ರ ಸಹಿತಂ=ರಾಜಶ್ರೇಷ್ಠರಿಂಥ ಕೂಡಿದ ಮಗಧಾಧಿರಾಜಂ= ಮಗಧಾಧಿರಾಜಂ=ಮಗಧಕ್ಕೆ ಒಡೆಯನಾದ ಜರಾಸಂಧನನ್ನು ಜವೇನ=ವೇಗದಿಂದ ಪ್ರಯಯೌ=ಹೋದನು. ॥ ೨೨ ॥

ರಾಮಃ ಪ್ರಗೃಹ್ಯ ಮುಸಲಂ ಸಹಲಂ ಚ ಯಾನಮಾಸ್ಥಾಯಕ ಶರಾಸನತೂಣಯುಕ್ತಃ ।

ಸೈನ್ಯಂ ಜರಾಸುತ ಸುರಕ್ಷಿತ ಮಭ್ಯಧಾವತ್ ಹರ್ಷಾನ್ನದನ್ನರಿ ಬಲೋರಿಭಲೈರಧೃಷ್ಯಃ ॥ ೨೩ ॥

ಅನ್ವಃ:- ಅರಿಬಲೈಃ=ಶತ್ರುಗಳ ಶಕ್ತಿಯಿಂದ ಅಧೃಷ್ಯ=ಬಲಾತ್ಕರಿಸಲು ಅಶಕ್ಯನಾದ ರಾಮಃ=ಬಲರಾಮನು ಸಹಲಂ=ನೇಗಿಲಿನಿಂದ ಕೂಡಿದ ಮುಸಲಂ=ಒನಕೆಯನ್ನು ಪ್ರಗೃಹ್ಯ=ಹಿಡಿದುಕೊಂಡು ಯಾನಂ=ರಥವನ್ನು ಆಸ್ಥಾಯ=ಹತ್ತಿಕೊಂಡು ಸಾಯಕಶರಾಸನತೂಣಯುಕ್ತಃ=ಬಾಣ ಧನಸ್ಸು ಬತ್ತಳಿಕೆಯಿಂದ ಕೂಡಿದವನಾಗಿ ಜರಾಸುತ ಸುರಕ್ಷಿತಂ = ಜರಾಸಂಧನಿಂದ ಚೆನ್ನಾಗಿ ರಕ್ಷಿಸಲ್ಪಟ್ಟ ಸೈನ್ಯಂ=ಸೈನ್ಯವನ್ನು ಉರುಬಲಸನ್ = ಬಿಹಳ ಶಕ್ತಿಉಳ್ಳವನಾಗಿ ಅಭ್ಯಧಾವತ್=ಓಡಿ ಹೋದನು. ॥ ೨೩ ॥

ಉದ್ವೀಕ್ಷ್ಯ ಕೃಷ್ಣಮಯಾಂತಮನಂತಶಕ್ತಿಮ್ ರಾಜೇಂದ್ರವೃತ ಸಹಿತೋ ಮಗಧಾಧಿರಾಜಃ ।
ಉದ್ವೇಲ ಸಾಗರವದಾಶ್ವಭಿಯಾಯ ಕೋಪಾತ್ ನಾನಾವಿಧಾಯುಧವರೈರಭಿವರ್ಷಮಾಣಃ ॥ ೨೪ ॥

ಅನ್ವಃ:- ಮಗಧಾಧಿರಾಜಃ=ಜರಾಸಂಧನು ಅನಂತಶಕ್ತಿಂ=ಅಪರಿಮಿತ ಒಲವುಳ್ಳ ಕೃಷ್ಣಂ=ಶ್ರೀಕೃಷ್ಣನನ್ನು ಅಭಿಯಾತಂ = ಬಂದವನನ್ನು ಉದ್ವೀಕ್ಷ್ಯ=ನೋಡಿ ಉದ್ವೇಲಸಾಗರವತ್=ದಡದಾಟಿ ಉಕ್ಕಿ ಹರಿದ ಸಾಗರದಂತೆ ರಾಜೇಂದ್ರವೃಂದ ಸಹಿತಃಸನ್=ರಾಜರ ಸಮೂಹದಿಂದ ಕೂಡಿರುವವನಾಗಿ ಕೋಪಾತ್ = ಕೋಪದಿಂದ ನಾನಾವಿಧಾಯುಧವರೈಃ=ಬಗೆ ಬಗೆ ಶ್ರೇಷ್ಠ ಶಸ್ತ್ರಗಳಿಂದ ಅಭಿವರ್ಷಮಾಣಃ = ಮಳೆಗೆರೆಯುತ್ತಾ ಅಭಿಯಯೌ=ಬಂದನು. ॥ ೨೪ ॥

ತಂವೈ ಚುಕೋಪಯಿಷುರಗ್ರತ ಉಗ್ರಸೇನಂ ಕೃಷ್ಣೋನಿಧಾಯ ಸಮುಗಾತ್ಸ್ವಯಮಸ್ಯ ಪಶ್ಚಾತ್ ।
ದೃಷ್ಟ್ವಾಗ್ರತೋ ಮಗಧರಾಟ್ ಸ್ಥಿತಮುಗ್ರಸೇನಂ ಕೋಪಾಚ್ಚಲತ್ತನುರಿದಂ ವಚನಂ ಬಭಾಷೆ ॥ ೨೫ ॥

ಅನ್ವಃ:- ತಂ=ಆ ಜರಾಸಂಧನನ್ನು ಚುಕೋಪಯಿಷುಃ=ಕುಪಿತನನ್ನಾಗಿಸಲು ಇಚ್ಛೆವುಳ್ಳವನಾಗಿ ಅಗ್ರತಃ=ಶ್ರೀಕೃಷ್ಣನ ಮುಂದೆ ಉಗ್ರಸೇನಂ ಅಜ್ಞ ಉಗ್ರಸೇನನನ್ನು ನಿಧಾಯ=ಮಾಡಿಕೊಂಡು ಸ್ವಯಂ=ತಾನು ಅಸ್ಯ=ಈ ಉಗ್ರಸೇನನ ಪಶ್ಚಾತ್=

ಹಿಂದೆ ಸ್ಥಿತಃಸನ್=ಇದ್ದವನಾಗಿ ಅಗಾತ್=ಯುದ್ಧಕ್ಕೆ ಹೋದನಂ ಮಗಧರಾಟ್ = ಜರಾಸಂಧನು ಉಗ್ರಸೇನಂ=ಉಗ್ರಸೇನನನ್ನು ಅಗ್ರತಃ=ಎದುರು ಸ್ಥಿತಂ=ಇದ್ದುದನ್ನು ದೃಷ್ಟ್ವಾ ನೋಡಿ ಕೋಪಾತ್=ಕೋಪದಿಂದ ಚಲತ್ತನುಃ=ನಡುಗಿದ ಶರೀರ ಉಳ್ಳವನಾಗಿದ್ದು ಇದಂ=ಇದಾವ ವಚನಂ=ಮಾತನ್ನು ಬಭಾಷೆ=ಹೇಳಿದನು. ॥ ೨೫ ॥

ಪಾಪಾಪಯಾಹಿ ಪುರತೋ ಮಮ ರಾಜ್ಯಕಾಮ ನಿರ್ಲಜ್ಜ ಪುತ್ರವಧಕಾರಣ ಶತ್ರುಪಕ್ಷ ।
ತ್ವಂ ಜೀರ್ಣಬಸ್ತಸದೃಶೋ ನಮಯೇಹವಧ್ಯಃ ಸಿಂಹೋ ಹಿ ಸಿಂಹಮಭಿಯಾತಿ ನ ವೈ ಸೃಗಾಲಂ ॥೨೬॥

ಅನ್ವಃ- ಪಾಪ=ಎಲೋ ಪಾಪಿಯೇ ರಾಜ್ಯಕಾಮಃ=ರಾಜ್ಯಲಬ್ಧನೇ ನಿರ್ಲಜ್ಜ=ನಾಚಿಕೆ ಇಲ್ಲದವನೇ ಪುತ್ರವಧಕಾರಣ= ಮಗನ ಸಾವಿಗೆ ಕಾರಣನಾದವನೇ ಶತ್ರುಪಕ್ಷ=ಶತ್ರುಪಕ್ಷದಲ್ಲಿರತಕ್ಕವನೇ ತ್ವಂ=ನೀನು ಮಮ=ನನ್ನ ಪುರತಃ=ಎದುರಿನಿಂದ ಅಪಯಾಹಿ=ಸರಿಯು ತ್ವಂ=ನೀನು ಜೀರ್ಣಬಸ್ತಸದೃಶಃ=ಮುದಿ ಆಡಿಗೆ ಸಮಾನನು ಅತಃ ಏವ=ಆದ್ದರಿಂದಲೇ ಮಯಾ= ನನ್ನಿಂದ ಇಹ=ಈ ಯುದ್ಧದಲ್ಲಿ ವಧ್ಯಃ=ಕೊಲ್ಲಲಿಕ್ಕೆ ಯೋಗ್ಯನಂ ನ=ಅಲ್ಲ ಹಿ=ಯಾಕೆಂದರೆ ಸಿಂಹಃ=ಸಿಂಹವು ಸಿಂಹಂ= ಸಿಂಹವನ್ನು ಅಭಿಯಾತಿ=ಹೋಗುತ್ತದೆ ಸೃಗಾಲಂ=ನರಿಯನ್ನು ನಾಭಿಯಾತಿ=ಹೋಗಲಾರದು. ॥ ೨೬ ॥

ಅಕ್ಷಿಪ್ತವಿತ್ಥಮವಮುಸಾಥ ಸ ಭೋಜರಾಜಸ್ತೂಣಾತ್ಪ್ರಗೃಹ್ಯ ನಿಶಿತಂ ಶರಮಾಶು ತೇನ ।
ಛಿತ್ವಾ ಜರಾಸುತಧನುರ್ಬಲವಾನ್ನನಾದ ವಿವ್ಯಾಧ ಸಾಯಕಗಣೈಶ್ಚ ಪುನಸ್ತಮುಗ್ರೈಃ ॥ ೨೭ ॥

ಅನ್ವಃ- ಅವಮಿನಾ=ಈ ಜರಾಸಂಧನಿಂದ ಇತ್ಥಂ = ಈ ರೀತಿಯಾಗಿ ಆಕ್ಷಿಪ್ತಃ=ಆಕ್ಷೇಪಿಸಲ್ಪಟ್ಟ (ತಿರಸ್ಕರಿಸಲ್ಪಟ್ಟ) ಸ ಭೋಜರಾಜಃ=ಆ ಉಗ್ರಸೇನನು ತೂಣಾತ್=ಬತ್ತಳಿಕೆಯಿಂದ ನಿಶಿತಂ ಶರಂ=ಚೂಪಾದ ಬಾಣವನ್ನು ಆಶು=ಬೇಗನೆ ಪ್ರಗೃಹ್ಯ=ಹಿಡಿದುಕೊಂಡು ತೇನ=ಅದರಿಂದ ಜರಾಸುತಧನುಃ=ಜರಾಸಂಧನ ಧನುಸ್ಸನ್ನು ಛಿತ್ವಾ=ತುಂಡರಿಸಿ ಬಲವಾನ್= ಬಲಉಳ್ಳವನಾಗಿ ನನಾದ=ಗರ್ಜಿಸಿದನು. ಪುನಃ=ಮತ್ತು ತಂ=ಆ ಜರಾಸಂಧನನ್ನು ಉಗ್ರೈಃ=ತೀಕ್ಷ್ಣಗಳಾದ ಸಾಯಕಗಣೈಃ= ಬಾಣಗಳ ಸಮೂಹದಿಂದ ವಿವ್ಯಾಧ = ಗಾಯಗೊಳಿಸಿದನು. ॥ ೨೭ ॥

ಅನ್ಯಚ್ಛರಾಸನವರಂ ಪ್ರತಿಗೃಹ್ಯ ಕೋಪಾತ್ ಸಂರಕ್ತನೇತ್ರಮಭಿಯಾಂತ ಮುದೀಕ್ಷ್ಯ ಕೃಷ್ಣಃ ।
ಭೋಜಾಧಿರಾಜವಧಕಾಂಕ್ಷಿಣ ಮುಗ್ರವೇಗಂ ಬಾರ್ಹದ್ರಥಂ ಅಭಿಯಾಯೌ ಪರವೋ ರಥೇನ ॥ ೨೮ ॥

ಅನ್ವಃ ಅನ್ಯತ್=ಬೇರೊಂದು ಶರಾಸನವರಂ = ಉತ್ತಮ ಬಿಲ್ಲನ್ನು ಪ್ರತಿಗೃಹ್ಯ = ಹಿಡಿದುಕೊಂಡು ಕೋಪಾತ್= ಸಿಟ್ಟಿನಿಂದ ಸಂರಕ್ತನೇತ್ರಂ = ಕೆಂಪಾದ ಕಣ್ಣುಳ್ಳ ಭೋಜಾಧಿರಾಜವಧಕಾಂಕ್ಷಿಣಂ = ಉಗ್ರಸೇನನನ್ನು ಕೊಲ್ಲಲಂ ಇಚ್ಛಿಸು ತ್ತಿರುವ ಉಗ್ರವೇಗಂ = ಶೀಘ್ರಗಾಮಿಯಾದ ಬಾರ್ಹದ್ರಥಂ=ಜರಾಸಂಧನನ್ನು ಅಭಿಯಾಂತಮುದೀಕ್ಷ್ಯ = ಬಂದವನನ್ನಾಗಿ ಕಂಡು ಪರಶಿವಃ =ಶ್ರೇಷ್ಠನಾದ ಕೃಷ್ಣಃ = ಶ್ರೀಕೃಷ್ಣನಂ ರಥೇನ = ರಥದಿಂದ ಪ್ರತಿಯಯೌ = ಬಂದನು. ॥ ೨೮ ॥

ಆಯಾಂತ ಮೀಕ್ಷ್ಯಭಗವಂತಮನಂತವೀರ್ಯಂ ಚೇದೀಶ ಪೌಂಡ್ರಕಮುಖರಾಜಗಣೈಃ ಸಮೇತಃ ।
ನಾನಾವಿಧಾಸ್ತ್ರವರಶಸ್ತ್ರಗಣೈರ್ವವರ್ಷ ಮೇರುಂ ಯಥಾ ಘನ ಉದೀರ್ಣರವೋಜತೌಘೈಃ ॥ ೨೯ ॥

ಅನ್ವಃ- ಸಃ = ಆ ಜರಾಸಂಧನು ಅನಂತವೀರ್ಯಂ = ಅಪರಿಮಿತ ಸಾಮರ್ಥ್ಯದಿಂದ ಕೂಡಿದ ಭಗವಂತಂ = ಶ್ರೀ ಕೃಷ್ಣ ನನ್ನು ಆಯಾಂತಂ = ಬಂದವನನ್ನಾಗಿ ಈಕ್ಷ್ಯ = ನೋಡಿ ಚೇದೀಶ ಪೌಂಡ್ರಕಮುಖರಾಜಗಣೈಃ ಸಮೇತಃ = ಶಿಶುಪಾಲನಾಗಿ ಪೌಂಡ್ರಕ ವಾಸುದೇವ ಇವರೇ ಪ್ರಮುಖರಾಗಿ ಉಳ್ಳ ರಾಜರ ಸಮೂಹದಿಂದ ಕೂಡಿದವನಾಗಿ ನಾನಾವಿಧಾಸ್ತ್ರವರಶಸ್ತ್ರ ಗಣೈಃ = ಬಹಳಗಳಾದ ಉತ್ತಮ ಅಸ್ತ್ರಗಳು ಮತ್ತು ಆಯುಧಗಳ ಸಮೂಹದಿಂದ ವವರ್ಷ = ಮಳೆಗರಿಸಿದನು. ಯಥಾ= ಹೇಗೆ ಉದೀರ್ಣರವ = ಬಹಳ ಗರ್ಜನೆ ಉಳ್ಳ ಘನಃ = ಮೇಘವು ಜಲೌಘೈಃ = ನೀರಿನ ಸಮುದಾಯದಿಂದ ಮೇರುಂ= ಮೇರು ಪರ್ವತವನ್ನು ಹೇಗೋತಥಾ = ಹಾಗೆ ಉದೀರ್ಣರವಃ ಸನ್ = ಒಳ್ಳೆ ಗರ್ಜನೆ ಮಾಡುತ್ತಾ ವವರ್ಷ = ಮಳೆ ಗರಿಸಿದನು ॥ ೨೯ ॥

ಶಸ್ತ್ರಾಸ್ತ್ರವೃಷ್ಟಿಂ ಮಭಿತೋ ಭಗವಾನ್ವಿನೃತಚ್ಛ ಶಾರ್ಙ್ಗೋತ್ಥಸಾಯಕಗಣೈರ್ವಿರಥಾಶ್ವಸೂತು ।
ಚಕ್ರೇ ನಿರಾಯುಧಮಸಾ ಮಗಧೇಂದ್ರ ಮಾಶು ಛಿನ್ನಾತಪತ್ರ ವರಕೇತು ಮಚಿಂತ್ಯ ಶಕ್ತಿಃ ॥ ೩೦ ॥

ಅನ್ವಃ- ಅಚಿಂತ್ಯಶಕ್ತಿಃ = ಬಹಳ ಬಲವುಳ್ಳ ಭಗವಾನ್ ಅಸೌ = ಈ ಶ್ರೀಕೃಷ್ಣನು ಶಾರ್ಙ್ಗೋತ್ಥಸಾಯಕಗಣೈಃ= ಶಾರ್ಙ್ಗಧನುಸ್ಸಿನಿಂದ ಹೊರಟಿರುವ ಬಾಣಗಳ ಸಮೂಹದಿಂದ ಅಭಿತಃ = ಎಲ್ಲಾ ಕಡೆ ಶಸ್ತ್ರಾಸ್ತ್ರವೃಷ್ಟಿಂ = ಮಂತ್ರಾಯುಧಗಳ ಮಳೆಯನ್ನು ವಿನೃಶ್ಚ್ = ನಾಶಮಾಡಿ ಮಗಧೇಂದ್ರಂ =ಜರಾಸಂಧನನ್ನು ಆಶು = ಬೇಗನೆ ವಿರಥಾಶ್ವಸೂತಂ = ರಥ ಸಾರಥಿ ಇವರಿಂದ ಹೀನನನ್ನಾಗಿ ನಿರಾಯುಧಂ = ಆಯುಧ ಇಲ್ಲದವನನ್ನಾಗಿಯೂ ಛಿನ್ನಾತಪತ್ರ ವರಕೇತುಂ = ತುಂಡರಿಸಲ್ಪಟ್ಟ ಛತ್ರ ಹಾಗೂ ಉತ್ತಮ ಧ್ವಜವುಳ್ಳವನನ್ನಾಗಿ ಚಕ್ರೇ = ಮಾಡಿದನು. ॥ ೩೦ ॥

ನೈನಂ ಜಘಾನ ಭಗವಾನ್ ಸುಶಕಂಚ ಭೀಮೋ ಭಕ್ತಿಂ ನಿಜಾಂ ಪ್ರಥಯಿತುಂ ಯಶ ಉಚ್ಚಧರ್ಮಂ ।
ಚೇದೀಶಪೌಂಡ್ರಕಸಕೀಚಕ ಮದ್ರರಾಜಂ ಸಾಲ್ವೈಕಲವ್ಯ ಪ್ರಮುಖಾನ್ ವಿರಥಾಂಶ್ಚಕಾರ ॥ ೩೧ ॥

ಅನ್ವಃ ಭಗವಾನ್ = ಪೂಜ್ಯ ಶ್ರೀಕೃಷ್ಣನು ಭೀಮೆ = ಭೀಮಸೇನನಲ್ಲಿರುವ ನಿಜಾಂ = ತನ್ನ ವಿಷಯಂಕವಾದ ಭಕ್ತಿಂ= ಮಹಾತ್ಮ್ಯಸ್ನೇಹವನ್ನು ಯಶಃ = ಕೀರ್ತಿಯನ್ನು ಉಚ್ಚಧರ್ಮಂ =ಶ್ರೇಷ್ಠ ಧರ್ಮವನ್ನು ಪ್ರಥಯಿತುಂ = ಪ್ರಸಿದ್ಧಪಡಿಸುವುದಕ್ಕೋಸ್ಕರ ಸಂಶಕಂಚ = ಕೊಲ್ಲಲಿಕ್ಕೆ ಸಾಧ್ಯನಾದರೂ ಏನಂ = ಈ ಜರಾಸಂಧನನ್ನು ನಜಘಾನ = ಕೊಲ್ಲಲಿಲ್ಲ ಚೇದೀಶ ಪಾಂಡ್ರಕಸರೇಚಕ ಮದ್ರರಾಜಂ = ಶಿಶುಪಾಲ ಪೌಂಡ್ರಕವಾಸುದೇವ ಕೀಚಕ ಇವರಿಂದ ಕೂಡಿದ ಮದ್ರರಾಜಂ = ಜರಾಸಂಧನನ್ನು ವಿರಥಂ ಚಕಾರ = ರಥಹೀನನನ್ನಾಗಿ ಮಾಡಿದನು ಸಾಲ್ವೈಕಲವ್ಯ ಪ್ರಮುಖಾನ್ = ಸಾಲ್ವ ಏಕಲವ್ಯ ಮುಂತಾದವರನ್ನೂ ವಿರಥಾನ್ = ರಥವಿಲ್ಲದವರನ್ನಾಗಿ ಚಕಾರ = ಮಾಡಿದನು. ॥ ೩೧ ॥

ಯೇ ಚಾಪಿ ಹಂಸಡಿಭಿಕ ದ್ರುಮರುಗ್ಮಿಮುಖ್ಯಾಃ ಬಾಹ್ಲೀಕಭೌಮಸುತ ವೈಂದ ಪುರಸ್ಸರಾಶ್ಚ ।
ಸರ್ವೇಪ್ರದುದ್ರುವುರಜಸ್ಯ ಶರೈರ್ವಿಭಿನ್ನಾ ಅನ್ಯೇಚಭೂವಿ ಪತಯೋ ಯಇಹಾಸುರುರ್ವ್ಯಾಂ ॥ ೩೨ ॥

ಅನ್ವಃ- ಯೇಚ = ಯಾವ ಹಂಸಡಿಭಿಕದ್ರುಮರುಗ್ಮಿಮುಖ್ಯಾಃ = ಹಂಸಡಿಭಿಕ ರುಗ್ಮಿ ಇವರೇ ಪ್ರಧಾನರಾಗಿ ಉಳ್ಳ ಬಾಹ್ಲೀಕಭೌಮಸುತ ವೈಂದ ಪುರಸ್ಸರಾಶ್ಚ = ಬಾಹ್ಲೀಕ ನರಕಸುತ ಭಗದತ್ತ ವೈಂದ ವಿವಿದ ಮುಂತಾದವರೂ ಕೂಡ ಅಪಿಚ = ಮತ್ತೂ ಕೂಡ ಯೇ ಭೂಮಿಪತಯಃ = ಯಾವರಾಜರು ಇಹ = ಇದಾವ ಉರ್ವ್ಯಾಂ = ಯುದ್ಧ ಭೂಮಿಯಲ್ಲಿ ಆಸುಃ = ಇದ್ದರೋ ತೇಸರ್ವೇಪಿ = ಅವರೆಲ್ಲರೂ ಅಜಸ್ಯ = ಅನಾದಿಯಾದ ಶ್ರೀಕೃಷ್ಣನ ಶರೈಃ = ಬಾಣಗಳಿಂದ ವಿಭಿನ್ನಾಃ ಸಂತಃ = ಹೊಡೆತವನ್ನು ತಿಂದವರಾಗಿ ಪ್ರದುದ್ರುವು = ಓಡಿದರು. ॥ ೩೨ ॥

ಛಿನ್ನಾಯುಧಧ್ವಜ ಪತಾಕರಥಾಶ್ವಸೂತವರ್ಮಾಣ ಉಗ್ರಶರತಾಡಿತ ಬಿನ್ನಗಾತ್ರಾ ।
ಸಸ್ತ್ರಾಂಬರಾಭರಣ ಮೂರ್ಧಜಮೌಲ್ಯ ಹೀನಾಃ ರಕ್ತಂವಮಂತ ಉರು ದುದ್ರುವುರಾಶುಭೀತಾಃ ॥೩೩॥

ಅನ್ವಃ ತೇ ಭೂಮಿಪತಯಃ = ಆ ಹಿಂದೆ ಪ್ರಸ್ತುತರಾದ ರಾಜರು ಛಿನ್ನಾಯುವರ್ಮಾಣಃ = ಛಿನ್ನ =ತುಂಡಾದ ಆಯುಧಾಸ್ತ್ರಗಳು ಧ್ವಜ = ರಥಚಿಹ್ನೆಯು ಪತಾಕ = ರಥಕ್ಕೆ ಕಟ್ಟಿದ ಪರದೆಯು ರಥಾಶ್ವಸೂತ = ರಥ ಕುದುರೆ ಸಾರಥಿ ವರ್ಮಾಣಃ ಸಂತಃ = ಕವಚ ಇವುಗಳುಳ್ಳವರಾಗಿ ಉಗ್ರಗಾತ್ರಃ = ಉಗ್ರ = ತೀಕ್ಷ್ಣಗಳಾದ ಶರ ಬಾಣದಿಂದ ತಾಡಿತ = ಹೊಡೆಯಲ್ಪಟ್ಟ ಆದ್ದರಿಂದಲೇ ಛಿನ್ನ = ತುಂಡಾದ ಗಾತ್ರಾಃ = ಶರೀರ ಉಳ್ಳವರಾಗಿ ಸ್ರಸ್ತಾ = ಹೀನಾಃ ಸ್ರಸ್ತ = ಕಳಚಿ ಬಿದ್ದ ಅಂಬರ = ವಸ್ತ್ರ ಆಭರಣ = ಆಲಂಕಾರ ವಸ್ತುಗಳು ಮೂರ್ಧಜ = ಕಿರೀಟ ಮೌಲ್ಯ = ಮಾಲೆ ಇವುಗಳಿಂದ ಹೀನಾಃ= ರಹಿತರಾಗಿ ಉರು = ಬಹಳವಾಗಿ ರಕ್ತಂ = ರಕ್ತವನ್ನು ವಮಂತಃ = ಸಂತಃ = ಕಾರತಕ್ಕವರಾಗಿ ಭೀತಾಃ ಸಂತಃ =ಹೆದರಿದವರಾಗಿ ಆಶು = ಬೇಗನೇ ದುದ್ರುವುಃ = ಓಡಿದರು.

ಕೋಚ್ಯಾಂ ದಶಾ ಮುಪಗತೇಷು ನೃಪೇಷುಸರ್ವೇಷ್ವಾತ್ತಾಯುಧೇಷು ಹರಿಣಾಯುಧಿವಿದ್ರವತ್ಸು ।
ನಾನಾಯುಧಾಢ್ಯಮುಪರಂರಥಂ ಮುಗ್ರ ವೀರ್ಯಂ ಆಸ್ಥಾಯ ಮಾಗಧಪತಿಃ ಪ್ರಸಾರ ರಾಮುಮ್ ॥ ೩೪ ॥

ಅನ್ವಃ:- ಹರಿಣಾ=ಶ್ರೀಕೃಷ್ಣನಿಂದ ಶೋಬ್ಯಾಂ=ದುಃಖಿಸಲಿಕ್ಕೆ ಯೋಗ್ಯವಾದ ದಶಾಂ=ಸ್ಥಿತಿಯನ್ನು ಉಪಗತೇಷು= ಹೊಂದಿದವರಾದ ಆತ್ತಾಯುಧೇಷಾ=ಅಪಹರಿಸಲ್ಪಟ್ಟ ಆಯುಧವುಳ್ಳ ನೃಪೇಷು=ರಾಜರುಗಳು ಸರ್ವೇಷು=ಎಲ್ಲರೂ ವಿದ್ರವತ್ಸು=ಓಡುತ್ತಿರಲು ಮಾಗಧಪತಿಃ=ಜರಾಸಂಧನು ನಾನಾಯುದಾಢ್ಯಂ=ಬಹಳ ಶಸ್ತ್ರ ಸಂಗ್ರಹ ಉಳ್ಳ ಅನ್ಯಂ= ಇನ್ನೊಂದು ರಥಂ=ರಥವನ್ನು ಆಸ್ಥಾಯ=ಹತ್ತಿಕೊಂಡು ಉಗ್ರವೀರ್ಯಂ=ಬಹಳ ಶೂರನಾದ ರಾಮಮ್ = ಬಲ ರಾಮನನ್ನು ಪ್ರಸಸಾರ=ಬಂದನು (ಯುದ್ಧಕ್ಕೆ ಎಂಬುದು ಅಧ್ಯಾಹಾರ್ಯ)

ಆಧಾವತೋಸ್ಯ ಮುಸಲೇನ ರಥಂ ಬಭಂಜ ರಾಮೋ ಗದಾಮುರುತರೋರಸಿ ಸೋಪಿ ತಸ್ಯ ।
ಚಿಕ್ಷೇಪತಂಚ ಮುಸಲೇನ ತತಾಡ ರಾಮಃ ತಾವುತ್ತಮೌ ಬಲವತಾಂ ಯುಯುಧಾತ ಉಗ್ರಂ ॥೩೪॥

ಅನ್ವಃ:- ರಾಮಃ=ಬಲರಾಮನು ಆಧಾವತಃ=ಓಡಿ ಬರುತ್ತಿರ್ಕ್ಕ ಆಸ್ಯ=ಈ ಜರಾಸಂಧನ ರಥಂ=ರಥವನ್ನು ಮುಸಲೇನ= ಒನಕೆಯಿಂದ ಬಭಂಜ=ಧ್ವಂಸ ಮಾಡಿದನು. ಸೋಪಿ=ಆ ಜರಾಸಂಧನಾದರೂ ತಸ್ಯ=ಆ ಬಲರಾಮನ ಉರುತರೋರಸಿ= ಉತ್ಕೃಷ್ಟ ಎದೆಯಂ ಮೇಲೆ ಗದಾಂ=ಗದೆಯನ್ನು ಚಿಕ್ಷೇಪ=ಬಿಸಾಡಿದನು. ರಾಮಃ=ಬಲರಾಮನೂ ತಂ ಚ=ಆ ಜರಾಸಂಧನನ್ನು ಮುಸಲೇನ=ಮುಸಲಾಯುಧದಿಂದ ತತಾಡ=ಹೊಡೆದನು. ಏವಂ=ಈ ರೀತಿಯಾಗಿ ತೌ ಬಲವತಾಂ ಉತ್ತಮೌ=ಆ ಶ್ರೇಷ್ಠ ಬಲಿಷ್ಠರು ಉಗ್ರಂ=ಭಯಂಕರವಾಗಿ ಪರಸ್ಪರಂ=ಅನ್ಯೋನ್ಯವಾಗಿ ಯುಯುಧಾತೇ=ಯುದ್ಧವನ್ನು ಮಾಡಿದರು. ॥ ೩೪ ॥

ತೌ ಚಕ್ರತುಃ ಪುರುನಿಯುದ್ಧಮಪಿಸ್ಮ ತತ್ರ ಸಂಚೂರ್ಣ್ಯ ಸರ್ವಗಿರಿ ವೃಕ್ಷ ಶಿಲಾಸಮೂಹಾನ್ ।
ದೀರ್ಘಂ ಸುಯುದ್ಧಮಭವತ್ಸಮಮೇತಯೋಸ್ತು ವಜ್ರಾ-ದ್ಧೃಢಾಂಗತಮಯೋರ್ಬಲಿನೋರ್ನಿ-
ತಾಂತಮ್ ॥ ೩೫ ॥

ಅನ್ವಃ:- ತೌ=ಆ ಜರಾಸಂಧ ಬಲರಾಮರೂ ತತ್ರ=ಆ ಯುದ್ಧರಂಗದಲ್ಲಿ ಸಮೀಪದಲ್ಲಿರುವ ಸರ್ವಗಿರಿವೃಕ್ಷಶಿಲಾಸಮೂಹಾನ್=ಎಲ್ಲಾ ಪರ್ವತ ಗಿಡ ಕಲ್ಲು ಇವುಗಳ ಸಮೂಹದಾಯವನ್ನು ಸಂಚೂರ್ಣ್ಯ = ತುಂಡರಿಸಿ ಪುರುನಿಯುದ್ಧಂ=ಉತ್ತಮ ಮಲ್ಲಿಯುದ್ಧವನ್ನು ಸಂಚಕ್ರತುಃ=ಮಾಡಿದರು. ವಜ್ರಾತ್ ದೃಢಾಂಗತಮಯೋ=ವಜ್ರಕ್ಕಿಂತ ಅತಿ ಗಟ್ಟಿಯಾದ ಶರೀರ ಉಳ್ಳ ಸಮಂಮೇತಾಯೋಃ=ಒಟ್ಟಿಗೆ ಸೇರಿದ ಬಲಿನೋಃ=ಶಕ್ತಿವಂತರಾದ ಏತಯೋಸ್ತು=ಆ ಜರಾಸಂಧ ಬಲರಾಮರಿಗೆ ದೀರ್ಘಂ ಬಹಳ ಕಾಲದ ಸುಯುದ್ಧಂ = ಒಳ್ಳೆಯ ಯುದ್ಧವು ಅಭವತ್=ನಡೆಯಿತು. ॥ ೩೫ ॥

ಶ್ರುತ್ವಾಥ ಶಂಬರವಮಂಬುಜಲೋಚನಸ್ಯ ವಿದ್ರಾವಿತಾನಪಿ ನೃಪಾನಭಿವೀಕ್ಷ್ಯ ರಾಮಃ ।
ಯುಧ್ಯಂತಮೀಕ್ಷ್ಯ ಚ ರಿಪುಂ ವವೃಧೇಬಲೇನ ತ್ಯಕ್ತ್ವಾರಿಪುಂ ಮುಸಲಮಾದದ ಆಶ್ವಮೋಘಂ ॥ ೩೬ ॥

ಅನ್ವಃ:- ಅಥ=ಅನಂತರ ರಾಮಃ=ಬಲರಾಮನು ಅಂಬುಜಲೋಚನಸ್ಯ=ಪುಂಡರಿಕಾಕ್ಷನಾದ ಶ್ರೀಕೃಷ್ಣನ ಶಂಖರವಂ= ಶಂಖನಾದವನ್ನು ಶ್ರುತ್ವಾ=ಕೇಳಿ ವಿದ್ರಾವಿತಾನ್ = ಓಡಿಸಲ್ಪಟ್ಟ ನೃಪಾನಪಿ=ರಾಜರನ್ನೂ ಕೂಡ ಅಭಿವೀಕ್ಷ್ಯ=ನೋಡಿ ರಿಪುಂ=ಶತ್ರುವನ್ನು ಯುಧ್ಯತಂ=ಯುದ್ಧ ಮಾಡತಕ್ಕವನನ್ನಾಗಿ ವೀಕ್ಷ್ಯ=ನೋಡಿ ಬಲೇನ=ಸಾಮರ್ಥ್ಯದಿಂದ ವವೃಧೇ=ಅಭಿ ಅಭಿವೃದ್ಧಿ ಹೊಂದಿದನು. (ಬಲಾಭಿವೃದ್ಧಿಯಾಯಿತು.) ಚ=ಮತ್ತು ಆಶಂ=ಬೇಗನೇ ರಿಪುಂ=ಶತ್ರುವನ್ನು ತ್ಯಕ್ತ್ವಾ = ಬಿಟ್ಟು ಅಮೋಘಂ=ಸಾರ್ಥಕವಾದ (ವ್ಯರ್ಥವಾಗದ ಮುಸಲಂ=ಮುಸಲಾಯುಧವನ್ನು ಆದದೇ=ಧರಿಸಿದನು (ಶತ್ರುವನ್ನು ಕೊಲ್ಲಲು) ॥ ೩೬ ॥

ತೇನಾಹಿತಃ ಶಿರಸಿ ಸಂಮುಮುಹೇತಿವೇಲಂ ಬಾರ್ಹದ್ರಥೋ ಜಗೃಹ ಏನಮಥೋ ಹ ಹಲೀಸಃ
ತತ್ಫಲಕಲವ್ಯ ಉತ ಕೃಷ್ಣಶರೈಃ ಪಲಾಯನ್ ಅಸ್ತ್ರಾಣಿ ರಾಮಶಿರಸಿ ಪ್ರಮುಮೋಚ ಶೀಘ್ರಂ ॥ ॥ ೩೭ ॥

ತೇನ=ಆ ಬಲರಾಮನಿಂದ ಶಿರಸಿ=ತಲೆಯಲ್ಲಿ ಆಹತಃ=ಜೆನ್ನಾಗಿ ಹೊಡೆಯಲ್ಪಟ್ಟ ಬಾರ್ಹದ್ರಥ=ಜರಾಸಂಧನು ಅತಿವೇಲಂಬೆನ್ನಾಗಿ ಸಂಮುಮುಹೇ=ಮೂರ್ಛೆ ಹೊಂದಿದನು ಅಥೋ=ಅನಂತರ ಏನಂ=ಈ ಜರಾಸಂಧನನ್ನು ಹಲೀಸಃ=

ಬಲಿಷ್ಟರಾಮನು ಜಗೃಹೇ=ಹಿಡಿದುಕೊಂಡನು ತತ್ರ=ಅದೇ ಸ್ಥಳದಲ್ಲಿ ಕೃಷ್ಣಶರೈಃ=ಕೃಷ್ಣನ ಬಾಣಗಳಿಂದ ಪಲಾಯನ್=ಪೆದರಿ ಓಡತಕ್ಕ ಏಕಲವ್ಯಃ=ಏಕಲವ್ಯನು ಉತ=ಹಾಗೆಯೇ ಅಸ್ತ್ರಾಣಿ=ಅಸ್ತ್ರಗಳನ್ನು ರಾಮಶಿರಸಿ=ಬಲರಾಮನ ತಲೆಗೆ ಶೀಘ್ರಂ=ಬೇಗ ಬೇಗನೆ ಪ್ರಮುಮೋಚ=ಬಿಟ್ಟನು. ॥ ೫೭ ॥

ಭೀತೇನ ತೇನ ಭಗವಾನ್ ಸಮರಂ ಅನಿಚ್ಛನ್ ಪ್ರದ್ಯುಮ್ನಮಾಶ್ವಸೃಜದಾತ್ಮಸುತಂ ಮನೋಜವಮ್ ।
ಪ್ರದ್ಯುಮ್ನ ಏನಮಭಿಯಾಯ ಮಹಾಸ್ತ್ರಜಾಲೈಃ ರಾಮಸ್ತು ಮಾಗಧ ಮಥಾತ್ಮ ರಥಂ ನಿನಾಯ ॥೫೮॥

ಅನ್ವಃ- ಭೀತೇನ=ಹೆದರಿ ಓಡಿಹೋಗಿರುವ ತೇನ = ಆ ಏಕಲವ್ಯನಿಂದ ಕೂಡಿಕೊಂಡು ಸಮರಂ ಅನಿಚ್ಛನ್=ಯುದ್ಧ ಮಾಡಲು ಇಚ್ಛೆ ಇಲ್ಲದ ಭಗವಾನ್=ಶ್ರೀಕೃಷ್ಣನು ಆತ್ಮಸುತಂ ತನ್ನ ಮಗನಾದ (ಆದಿಸೃಷ್ಟಿಯಲ್ಲಿ) ಮನೋಜಂ=ನಂತರ ಬ್ರಹ್ಮ ಮಾನಸ ಪುತ್ರನಾದ ಪ್ರದ್ಯುಮ್ನಂ=ಪ್ರದ್ಯುಮ್ನನನ್ನು ಆಶು = ಬೇಗನೆ ಅಸೃಜತ್ ಸೃಷ್ಟಿಸಿದನು. ಪ್ರದ್ಯುಮ್ನಃ=ಪ್ರದ್ಯುಮ್ನನು ಮಹಾಸ್ತ್ರಜಾಲೈಃ=ಶ್ರೇಷ್ಠ ಅಸ್ತ್ರಸಮೂಹಾಯಗಳಿಂದ ಸಹ=ಕೂಡಿಕೊಂಡು ಏನಂ=ಈ ಏಕಲವ್ಯನನ್ನು ಅಭಿಯಾಯ=ಯುದ್ಧಕ್ಕೆ ಹೋದನು. ಅಥ=ಅನಂತರ ರಾಮಸ್ತು=ಬಲರಾಮನಾದರೂ ಮಾಗಧಂ=ಜರಾಸಂಧನನ್ನು ಆತ್ಮರಥಂ=ತನ್ನ ರಥವನ್ನು ಕರಿತು ನಿನಾಯ=ತಂದನು.

ಯುದ್ಧ್ವಾಚಿರಂ ರಣಮುಖೇಭಗವತ್ಸುತೋಸೌ ಚಕ್ರೇ ನಿರಾಯುಧಮುಂ ಬೆರಮೇಕಲವ್ಯಂ ।
ಅಂಶೇನ ಯೋಭುವನುಗಾ ಸ್ಮಣಿಮಾನಿತಿಸ್ಮ ಸ ಕ್ರೋಧ ತಂತ್ರ ಕಗೆಣೇಷ್ವಧಿಪೋ ನಿಷಾಧಃ ॥ ೫೯ ॥

ಭಗವತ್ಸುತಃ ಅಸೌ=ಭಗವಂತನಾದ ಶ್ರೀಕೃಷ್ಣನ ಮಗನಾದ ಈ ಪ್ರದ್ಯುಮ್ನನು ರಣಮುಖೇ=ಯುದ್ಧರಂಗದಲ್ಲಿ ಯುದ್ಧಾ್ವ=ಯುದ್ಧ ಮಾಡಿ ಚಿರಂ=ಬಹುಕಾಲ ಏಕಲವ್ಯಂ = ಏಕಲವ್ಯನನ್ನು ನಿರಾಯುಧಂ = ಆಯುಧದಿಂದ ರಹಿತನನ್ನಾಗಿ ಚಕ್ರೇ=ಮಾಡಿದನು. ಏಕಲವ್ಯನ ಸ್ವರೂಪವನ್ನು ನಿಗೂಢವಾದದ್ದನ್ನು ಆಚಾರ್ಯರು ಹೇಳುತ್ತಾರೆ. ಯಃ= ಯಾವ ಏಕಲವ್ಯನು ಕ್ರೋಧತಂತ್ರಕಗಣೇಷು=ಕ್ರೋಧವಶ ಎಂಬ ದೈತ್ಯಗಣದಲ್ಲಿ ಮಣಿಮಾನಿತಿ=ಮಣಿಮಂತ ಎಂಬ ಹೆಸರುಳ್ಳವನಾಗಿ ಆಧಿಪಃ=ಸ್ವಾಮಿಯಾಗಿದ್ದನೋ ಸಃ=ಅವನು ಅಂಶೇನ=ಒಂದಂಶದಿಂದ ನಿಷಾದಃಸನ್=ಬೇಡರಲ್ಲಿ ಹುಟ್ಟಿದವನಾಗಿ ಭುವಂ=ಭೂವಿಗೆ ಅಗಾತ್=ಬಂದನು.

ಪ್ರದ್ಯುಮ್ನಮಾತ್ಮನಿ ನಿಧಾಯ ಪುನಃ ಸಕೃಷ್ಣಃ ಸಂಹೃತ್ಯ ಮಾಗೆಧಬಲಂ ನಿಖಿಲಂ ಶರೋಘೈಃ ।
ಭೂಯಶ್ಚ ಮೂ ಮುಭಿವಿನೇತು ಮುದಾರ ಕರ್ಮಾ ಬಾರ್ಯದ್ರಥಂ ತ್ವಮುಚದ ಕ್ಷಯ ಪೌರುಷೊಜಃ॥೬೦॥

ಕೃಷ್ಣಃ=ಶ್ರೀಕೃಷ್ಣನು ಪ್ರದ್ಯುಮ್ನಂ=ಪ್ರದ್ಯುಮ್ನನನ್ನು ಆತ್ಮನಿ=ತನ್ನ ಹೃದಯದಲ್ಲಿಟ್ಟುಕೊಂಡು ಪುನಃ=ಮತ್ತೂ ಕೂಡ ನಿಖಿಲಂ=ಸಂಪೂರ್ಣ ಮಾಗಧಬಲಂ = ಜರಾಸಂಧನ ಸೈನ್ಯವನ್ನು ಶರೋಘೈಃ=ಬಾಣಸಮೂಹದಿಂದ ಸಂಹೃತ್ಯ=ನಾಶ ಮಾಡಿ ಅಕ್ಷಯಪೌರುಷಃ=ನಾಶವಿಲ್ಲದ ಸಾಮರ್ಥ್ಯವುಳ್ಳ ಅಜಃ = ಶ್ರೀಕೃಷ್ಣನು (ಅನಾದಿಯಾದ) ಭೂಯಃ=ಮತ್ತೂ ಕೂಡ ಚಮೂಂ=ಸೈನ್ಯವನ್ನು ಅಭಿನೇತುಂ=ತೆಗೆದುಕೊಂಡು ಬರಲು ಬಾರ್ಹದ್ರತಂ=ಜರಾಸಂಧನನ್ನಾದರೂ ಅಮುಚತ್=ಬಿಟ್ಟನು.

ವ್ರೀಡಾನತಾಚ್ಛವಿಮುಖಃ ಸಹಿತೋ ನೃಪೈಸ್ತೈರ್ ಬಾರ್ಯದ್ರಥಃ ಪ್ರತಿಯಯೌ ಸ್ವಪುರೀಂ ಸ ಪಾಪಃ।
ಆತ್ಮಾಭಿಷಿಕ್ತಮುಪ ಭೋಜವರಾಧಿಪತ್ಯೇ ದೌಹಿತ್ರಮಗ್ರತ ಉತ ಪ್ರಣಿಧಾಯ ಮಂದಃ ॥ ೬೧ ॥

ವ್ರೀಡಾನತಾಚ್ಛವಿಮುಖಃ = ನಾಚಿಕೆಯಿಂದ ಬಗ್ಗಿದ, ಕಳಿಗುಂದಿದ ಮುಖವುಳ್ಳ ತೈಃನೃಪೈಃ=ಪರಾಜಿತರಾದ ರಾಜರುಗಳಿಂದ ಸಹಿತಃ=ಕೂಡಿದ ಮಂದಃ=ಅವಿಚಾರನಾದ (ಕರ್ತವ್ಯ ಅಕರ್ತವ್ಯ ಜ್ಞಾನಶೂನ್ಯನಾದ) ಪಾಪಃ=ಪಾಪಿಯಾದ ಸಃ ಬಾರುಹದ್ರಥಃ=ಆ ಜರಾಸಂಧನು ಭೋಜವರಾಧಿಪತ್ಯೇ=ಭೋಜಶ್ರೇಷ್ಠರ ರಾಜ್ಯಕ್ಕೆ ಆತ್ಮಾಭಿಷಿಕ್ತಮ್=ತನ್ನಿಂದ ಪಟ್ಟ ಕಟ್ಟಲ್ಪಟ್ಟ ಸ್ವದೌಹಿತ್ರಂ=ತನ್ನ ಮಗಳ ಮಗನನ್ನು ಉತಾಪಿ ರಾಜರು ಹಾಗೂ ಎಲ್ಲರೂ ಸೋತ ನಂತರವೂ ಕೂಡ ಅಗ್ರತಃ ಪ್ರಣಿಧಾಯ=ಮುಂಭಾಗದಲ್ಲಿ ಇಟ್ಟುಕೊಂಡು ಸ್ವ ಪುರೀಂ = ತನ್ನ ಪಟ್ಟಣಕ್ಕೆ ಪ್ರತಿಯಯೌ=ಹೋದನು.

ಜಿತ್ವಾ ತಮೂರ್ಜಿತ ಬಲಂ ಭಗವಾನ ಜೇಶಶಕ್ರಾದಿಭಿರ್ಕುಸುಮವರ್ಷಿಭಿರೀಡ್ಯಮಾನಃ ।
ರಾಮಾದಿಭಿಃ ಸಹಿತ ಆಶು ಪುರೀಂಪ್ರವಿಶ್ಯ ರೆಮೇಭಿ ವಂದಿತ ಪದೋ ಮಹತಾಂ ಸವಮೂಹೈಃ ॥ ೪೨ ॥

ಅನ್ವಃ ಭಗವಾನ್=ಷಡ್ಗುಣೈಶ್ವರ್ಯ ಸಂಪನ್ನನಾರ ಶ್ರೀಕೃಷ್ಣನು ಊರ್ಜಿತಬಲಂ= ಉತ್ಕೃಷ್ಟ ಬಲವುಳ್ಳ ತಂ=ಆ ಜರಾ ಸಂಧನನ್ನು ಚಿತ್ವಾ=ಗೆದ್ದು ಅಜೇಶಶಕ್ರಾದಿಭಿಃ=ಬ್ರಹ್ಮರುದ್ರ ಇಂದ್ರ ಇವರೇ ಮೊದಲಾದ ದೇವತೆಗಳಿಂದ ಕುಸುಮವರ್ಷಿಭಿಃ= ಪುಷ್ಪದ ಮಳೆಗರಿಸತಕ್ಕವರಿಂದ ಈಡ್ಯಮಾನಃ=ಹೊಗಳಿಕೊಳ್ಳತಕ್ಕವನಾಗಿ ರಾಮಾದಿಭಿಃ ಸಹಿತಃ ಸನ್=ರಾಮ(ಬಲರಾಮ) ನೇ ಮೊದಲಾದ ಯಾದವರಿಂದ ಕೂಡಿದವನಾಗಿ ಆಶು=ಬಹು ಬೇಗನೆ ಪುರೀಂ ಮಥುರಾ ಪಟ್ಟಣವನ್ನು ಪ್ರವಿಶ್ಯ=ಪ್ರವೇಶಿಸಿ ಮಹತಾಂ=ದೊಡ್ಡವರ ಸಮೂಹೈಃ = ಸಂಘದಿಂದ ಅಭಿವಂದಿತಪದಃ=ನಮಸ್ಕರಿಸಲ್ಪಟ್ಟ ಕಾಲುಳ್ಳವನಾಗಿ ರೇಮೇ= ಕ್ರೀಡಿಸಿದನು. ॥ ೪೨ ॥

ವರ್ಧತ್ಸು ಪಾಂಡುತನಯೇಷು ಚತುರ್ದಶಂತು ಜನ್ಮರ್ಕ್ಷ ಮಾಸ ತನಯಸ್ಯ ಸಹಸ್ರದೃಷ್ಟೇಃ ।
ಪ್ರತ್ಯಾಬ್ಧಿಕಂ ಮುನಿಗಣಾನ್ ಪರಿವೇಷಯಂತೀ ಕುಂತೀತದಾಸ ಬಹುಕಾರ್ಯಪರಾನಯಜ್ಞಾ ॥ ೪೩ ॥

ಅನ್ವಃ ಇದೇ ಸಮಯದಲ್ಲಿ ನಡೆದ ಪಾಂಡವರ ಕಥೆಯನ್ನು ಹೇಳುವರು. ಪಾಂಡುತನಯೇಷು = ಪಾಂಡವರು ವರ್ಧತ್ಸು ಸತ್ಸು = ಬೆಳೆಯುತ್ತಿರಲು ಸಹಸದೃಷ್ಟೇಃ = ಹತ್ತು ನೂರು ಕಣ್ಣುಳ್ಳ ಇಂದ್ರನ ತನಯಸ್ಯ=ಮಗನಾದ ಅರ್ಜುನನ ಪ್ರತ್ಯಾಬ್ಧಿ- ಕಂ=ವರ್ಷಂಪ್ರತಿ ನಡೆಯತಕ್ಕ ಜನ್ಮರ್ಕ್ಷ=ಜನ್ಮ ನಕ್ಷತ್ರವು. ಯದಾ=ಯಾವಾಗ ಆಸ=ಇತ್ತೋ ತದಾ=ಆಗ ನಯಜ್ಞಾ= ನಿಯಮವನ್ನು ತಿಳಿದಿರುವ(ವಿನಯ ಉಳ್ಳ) ಬರ್ಹುಕಾರ್ಯಪರಾ=ಬಹಳ ಕೆಲಸದಲ್ಲಿ ಆಸಕ್ತಳಾದ ಕುಂತೀ=ಕುಂತಿಯು ಮುನಿ ಗಣಾನ್=ಮುನಿಗಳ ಸಮೂಹನ್ನು ಪರಿವೇಷಯಂತೀ=ಆಸ=ಬಡಿಸತಕ್ಕವಳಾಗಿದ್ದಳು. ॥ ೪೩ ॥

ತತ್ಕಾಲ ಏವ ನೃಪತಿಃ ಸಹಮಾದ್ರವತ್ಯಾ ಪುಂಸ್ಕೋಕಿಲಾಕುಲಿತ ಘಲ್ಲವನಂ ದದರ್ಶ ।
ತಸ್ಮಿನ್ವಸಂತ ಪವನಸ್ಪರ್ಶೇಧಿತಃ ಸ ಕಂದರ್ಪ ಮಾರ್ಗಣವಶಂ ಸಹಸಾ ಜಗಾಮ ॥ ೪೪ ॥

ಅನ್ವಃ- ತತ್ಕಾಲೇ ಏವ=ಅದೇ ಸಮಯದಲ್ಲಿ, ನೃಪತಿಃ=ರಾಜನಾದ ಪಾಂಡುವು ಮಾದ್ರವತ್ಯಾ ಸಹ=ಮಾದ್ರೀಯಿಂದ ಕೂಡಿಕೊಂಡು ಪುಂಸ್ಕೋಕಿಲಾಕುಲಿತ ಪುಲ್ಲಿವನಂ ದದರ್ಶ=ಗಂಡು ಕೋಗಿಲೆಗಳಿಂದ ತುಂಬಿದ ಅರಳಿದ ಪುಷ್ಪ ಉಳ್ಳ ಉಪ ವನವನ್ನು ನೋಡಿದನು. ತಸ್ಮಿನ್=ಆ ಉಪವನದಲ್ಲಿ. ವಸಂತಪವನಸ್ಪರ್ಶೇಧಿತಃ=ವಸಂತ ಕಾಲದ ಗಾಳಿಯ ಸ್ಪರ್ಶದಿಂದ (ಮುಟ್ಟುವುದರಿಂದ) ಕಂದರ್ಪ ಮಾರ್ಗಣವಶಂ, ಸಹಸಾ ಜಗಾಮ=ಮನ್ಮಥನ ಬಾಣಕ್ಕೆ ಅಧೀನನಾದನು (ರತಿ ಕ್ರಿಡೆಯಲ್ಲಿ ಆಸಕ್ತನಾದನು.) ॥ ೪೪ ॥

ಜಗ್ರಾಹ ತಾಮಥ ತಯಾರಮಮಾಣ ಏವ ಯಾತೋ ಯಮಸ್ಯ ಸದನಂ ಹರಿಪಾದಸಂಗೀ ।
ಪೂರ್ವಂ ಶಚೀರ ಮಣಮಿಚ್ಛತ ಏಷವಿಘ್ನಂ ಶಕ್ರಸ್ಯ ತದ್ದರ್ಶನೋಪಗತೋ ಹಿ ಚಕ್ರೇ ॥ ೪೫ ॥

ಅನ್ವಃ- ಹರಿಪಾವಸಂಗೀ=ಪರಮಾತ್ಮನ ಪಾದದಲ್ಲಿ ಆಸಕ್ತನಾದ ಪಾಂಡುವು ಅಥ=ಕಾಮ ಬಾಣಕ್ಕೆ ವಶನಾದ ನಂತರ ತಾಂ= ಆ ಮಾದ್ರವತಿಯನ್ನು ಜಗ್ರಾಹ=ರತಿಕ್ರೀಡೆಗಾಗಿ ಸ್ವೀಕರಿಸಿದನು, ತತ್ಕಾಲೇ ಏವ=ಆ ರತಿ ಕ್ರೀಡೆ ಮಾಡುತ್ತಿರುವ ಸಮಯ ದಲ್ಲಿಯೇ ಯಮಸ್ಯ ಸದನಂ=ಯಮ ಪಟ್ಟಣವನ್ನು ಯಾತಃ=ಹೋದನು. (ರತಿಯಲ್ಲಿರುವಾಗ ಸಾಯಲು ಕಾರಣವನ್ನು ತಿಳಿ ಸುತ್ತಾರೆ) ಏಷಃ=ಈ ಪಾಂಡುವು ಹಿ=ಯಾವ ಕಾರಣದಿಂದ ಪೂರ್ವಂ=ಹಿಂದೆ ತಾನು ಪರಾವಹ ಎಂಬ ಮರುತ್ತಾಗಿದ್ದಾಗ ಶಚೀರಮಣಂ=ಶುಚಿಯೊಂದಿಗೆ ರತಿ ಕ್ರಿಡೆಯನ್ನು ಇಚ್ಛತಃ=ಇಚ್ಛಿಸತಕ್ಕ ಶಕ್ರಸ್ಯ=ಇಂದ್ರನಿಗೆ ತದ್ಧರ್ಶನೋಪಗತಃಸನ್= ಅವನನ್ನು ನೋಡಲಿಕ್ಕೆ ಎಂದು ಹೋಲಿಸಿದವನಾಗಿ ವಿಘ್ನಂ= ಚಕ್ರೇ=ತಡೆಯನ್ನುಂಟು ಮಾಡಿದವನು. ತಸ್ಮಾತ್=ಆದ್ದರಿಂದ ರತಿಕಾಲದಲ್ಲೇ ಮರಣವನ್ನು ಹೊಂದಿದನು. ॥ ೪೫ ॥

ತೇನೈವ ಮಾನುಷಮವಾಪ್ಯ ರತಿಸ್ಥ ಏವ ಪಂಚತ್ವಮಾಪ ರತಿವಿಘ್ನಂ ಅಪುತ್ರತಾಂ ಚ ।

ಮಾದ್ರೀಪತಿಂ ಮೃತಮುವೇಕ್ಷ್ಯರುರಾವ ದೂರಾತ್ತ ಚ್ಛ್ರುಶ್ರುವುಶ್ಚ ಪೃಥಯಾ ಸಹಪಾಂಡುಪುತ್ರಾಃ॥೪೬॥

ಅನ್ವಃ:- ತೇನೈವ=ಇಂದ್ರನಿಗೆ ರತಿವಿಘ್ನವನ್ನು ಮಾಡಿದ್ದರಿಂದಲೇ ಸಃ=ಪಾಂಡುವು ಮಾನುಪಂ=ಮನುಜತ್ವವನ್ನು ಅವಾಪ್ಯ=ಹೊಂದಿ ರತಿಸ್ಥ ಏವ=ರತಿಕ್ರೀಡೆಯಲ್ಲಿದ್ದಂತೆ ಪಂಚತ್ವಂ=ಸಾವನ್ನು ಅಪುತ್ರತಾಂ=ಮಕ್ಕಳ ರಾಹಿತ್ಯವನ್ನು ಅಪ=ಹೊಂದಿದನು.

ಯಸ್ಮಾತ್=ಯಾವ ಕಾರಣದಿಂದ ಸ್ವಾತ್ಕೋತ್ತಮೇಷು=ತನ್ನಕ್ಕಂತ ಉತ್ತಮರಾದವರಲ್ಲಿ ಮಾಡಲ್ಪಟ್ಟ ಸ್ವಲ್ಪೋಪಿ=ಅತ್ಯಲ್ಪವಾದ ದೋಷಃ=ದೋಷವು. ಉರುತಾಂ=ಹೆಚ್ಚಾದದ್ದು ಅಭಿಯಾತಿ=ಆಗುವುದೋ ಸುರೇಷು=ದೇವತೆಗಳಲ್ಲಿ ವಿಶೇಷತಃ=ಈ ನಿಯಮ ಇನ್ನು ವಿಶೇಷವಾಗಿರುವುದರಿಂದ ತಸ್ಮಾತ್=ಆದ್ದರಿಂದ ಪಾಂಡುವು ಅಪುತ್ರತ್ವವನ್ನು ರತಿಕಾಲದಲ್ಲಿ ಮರಣವನ್ನು ಪಡೆದುದು ಸರಿಯಾಗಿದೆ. ಮಾದ್ರೀ=ಮಾದ್ರಿಯು ಮೃತಂ=ಸತ್ತಿರುವ ಗಂಡನನ್ನು ಅವೇಕ್ಷ್ಯ=ನೋಡಿ ರುರಾವ=ಕೂಗಿದಳು. (ರೋಧಿಸಿದಳು) ತತ್=ಆ ರೋದನವನ್ನು ಪೃಥಯಾ ಸಹ=ಕುಂತಿಯಿಂದ ಕೂಡಿದ ಪಾಂಡುಪುತ್ರಾಃ=ಪಾಂಡವರು ಶುಶ್ರುವುಃ=ಕೇಳಿದರು. ॥ ೪೬ ॥

ತೇಷ್ವಾಗತೇಷು ವಚನಾದಪಿ ಮಾದ್ರವತ್ಯಾಃ ಪುತ್ರಾನ್ನಿವಾರ್ಯ ತು ಪೃಥಾ ಸ್ವಯಮೇವ ಚಾಗಾತ್ ।
ಪತ್ಯುಃಕಲೇವರ ಮುವೇಕ್ಷ್ಯ ನಿಶಮ್ಯ ಮಾದ್ರ್ಯಾಃ ಕುಂತೀ ಭೃಶಂ ವ್ಯಥಿತಹೃತ್ಕಮುಲೈವ ಮಾದ್ರೀಂ ।
ಧಿಕೃತ್ಯ ಚಾನುಮರಣಾಯ ಮತಿಂ ಚಕಾರ ತಸ್ಯಾಃ ಸ್ವನೋ ರುದಿತ ಜಃ ಶ್ರುತ ಆಶು ಪಾರ್ಥೈಃ ॥ ೪೭ ॥

ಅನ್ವಃ:- ಮಾದ್ರವತ್ಯಾಃ=ವಚನಾತ್=ಮಾದ್ರಿಯ ರೋಧನರೂಪ ಮಾತಿನಿಂದ ತೇಷುಪುತ್ರೇಷ್ವಪಿ ಆಗತೇಷು ಸತ್ಸು=ಆ ಎಲ್ಲಾ ಪಾಂಡವರು ಬರುತ್ತಿರಲು ಪೃಥಾತು=ಕುಂತಿಯಾದರು ಪುತ್ರಾನ್=ಮಕ್ಕಳುಗಳನ್ನು ನಿವಾರ್ಯ=ತಡೆದು ಸ್ವಯಮೇವ=ತಾನೊಬ್ಬಳೇ ಆಗಾತ್=ಹೋದಳು. ಕುಂತೀ=ಕುಂತಿಯು ಪತ್ಯುಃ=ಗಂಡನಾದ ಪಾಂಡುವಿನ ಕಲೇವರಂ=ನಿರ್ಜೀವ ಶರೀರವನ್ನು ಅವೇಕ್ಷ್ಯ=ನೋಡಿ ಮಾದ್ರ್ಯಾಃ=ಮಾದ್ರಿಯಿಂದ ನಿಶಮ್ಯ ಏವ=ಪಾಂಡು ಸತ್ತಿದ್ದಾನೆ ಎಂದು ಕೇಳಿದ ಕೂಡಲೆ ಭೃಶಂ=ಚೆನ್ನಾಗಿ ವ್ಯಥಿತಹೃತ್ಕಮಲಾಸೀ=ವ್ಯಥೆಗೊಂಡ ಹೃದಯ ಕಮಲ ಉಳ್ಳವಳಾಗಿ ಮಾದ್ರೀಂ=ಮಾದ್ರಿಯನ್ನು ಧಿಕೃತ್ಯ=ಧಿಕ್ಕರಿಸಿ ಅನುಮರಣಾಯ=ಗಂಡನೊಂದಿಗೆ ತಾನೂ ಸಾಯಲು ಮತಿಂಚ=ನಿಶ್ಚಯವನ್ನೂ ಕೂಡ ಚಕಾರ = ಮಾಡಿದಳು ರುದಿತಜಃ = ಕೂಗುವುದರಿಂದ (ರೋದನದಿಂದ) ಉಂಟಾದ ತಸ್ಯಾಃ = ಆ ಕುಂತಿಯ ಸ್ವನಃ = ಧ್ವನಿಯು ಆಶು = ಬೇಗನೇ ಪಾರ್ಥೈಃ = ಪಾಂಡವರಿಂದ ಶ್ರುತಃ=ಕೇಳಲ್ಪಟ್ಟಿತು. ॥ ೪೭ ॥

ತೇಷ್ವಾಗತೇಷ್ವಧಿಕ ಆಸ ವಿರಾವ ಏತಂ ಸರ್ವೇಪಿ ಶುಶ್ರುವು ರ್ಮುನಿಪ್ರವರಾ ಅಥಾತ್ರ ।
ಆಜಗ್ಮುರುತ್ತಮಕೃಪಾ ಮುನಿಲೋಕಮಧ್ಯೇ ಪತ್ನೀ ನೃಪಾನುಗಮನಾಯ ಚ ಪಸ್ಪೃಧಾತೇ ॥ ೪೮ ॥

ಅನ್ವಃ:- ತೇಷು ಆಗತೇಷು ಸತ್ಸು = ಆ ಪಾಂಡವರೂ ಬರುತ್ತಿರಲು ಏಷಃ = ರೋದನ ಶಬ್ದವು ಅಧಿಕಂ = ಆಸ=ಹೆಚ್ಚಾಯಿತು ಅಥ=ಅನಂತರ ಸರ್ವೇಪಿ = ಎಲ್ಲಾ ಅತ್ರ = ಈ ಕಾಡಿನಲ್ಲಿರುವ ಮುನಿಪ್ರವರಾಃ ಅಪಿ = ಮುನಿಪುಂಗವರೂ ಕೂಡ ಏತಂ = ಈ ಶಬ್ದವನ್ನು ಶುಶ್ರುವುಃ = ಕೇಳಿದರು. ಮುನಿ ಲೋಕ ಮಧ್ಯೇ = ಮುನಿ ಜನರ ಮಧ್ಯದಲ್ಲಿ ಯೇ = ಯಾರು ಉತ್ತಮಕೃಪಾಃ = ಬಹಳ ಕೃಪೆ ಉಳ್ಳವರೋ ತೇ = ಅವರು ಆಜಗ್ಮುಃ = ಬಂದರು. ಪತ್ನೀ ಚ = ಪಾಂಡುವಿನ ಪೆಂಡದಿರಿಬ್ಬರು ನೃಪಾನುಗಮನಾಯ = ಪಸ್ಪೃಧಾತೇ = ಗಂಡನೊಂದಿಗೆ ಸಹಗಮನ ಮಾಡಲು ಸ್ಪರ್ಧೆ ನಡೆಸಿದರು. ॥೪೮॥

ತೇಷನ್ನಿವಾಯ ತು ಪೃಥಾ ಮಥಮಾದ್ರವತ್ಯಾಃ ಭರ್ತುಃ ಸಹಾನುಗಮನಂ ಬಹಶೋರ್ಥಯಂತ್ಯಾಃ ।
ಸಂವಾದಮೇವ ನಿಜದೋಷವೇ ಕ್ಷ್ಯ ತಸ್ಯಾಃ ಚಕ್ರುಸ್ಸದಾವಗತ ಭಾಗವತೋಚ್ಚಧರ್ಮಾಃ ॥೪೯ ॥

ಅನ್ವಃ- ಸದಾವಗತಭಾಗವತೋಽಚ್ಯ ಧರ್ಮಾಃ=ಯಾವಾಗಲೂ ತಿಳಿಯಂಲ್ಪಟ್ಟ ಶ್ರೇಷ್ಠ ಭಾಗವತ ಧರ್ಮವುಳ್ಳ ತೇ=ಆ ಮುನಿಗಳು, ನಿಜದೋಷಂ=ಮಾದ್ರಿಯಿಂದ ಮಾಡಲ್ಪಟ್ಟ ಗಂಡನ ಮರಣಕ್ಕೆ ಕಾರಣಳಾದುದು ಎಂಬ ದೋಷವನ್ನು ಅವೇಕ್ಷ್ಯನ ವಿಚಾರ ಮಾಡಿ ಭರ್ತುಃ ಸಹಾನುಗಮನಂ=ಗಂಡನೊಂದಿಗೆ ಸಹಗಮನವನ್ನು ಬಹುಶಃ=ಬಹಳ ಬಾರಿ ಅರ್ಥಯಂತ್ಯಾಃ= ಬೇಡಿಕೊಳ್ಳತಕ್ಕ ತಸ್ಯಾಃ ಮಾದವತ್ಯಾಃ=ಆ ಮಾದ್ರಿಗೆ, ಪೃಥಾಂ=ಸನ್ನಿವಾರ್ಯ=ಸಹಗಮನದಿಂದ ಕುಂತಿಯನ್ನು ತಡೆದು ಸಹಾನುಗಮನಾಯ=ಸಹಗಮನಕ್ಕೋಸ್ಕರ ಸಂವಾದಮೇವ=ಒಪ್ಪಿಗೆಯನ್ನು ಚಕ್ಷುಃ=ಕೊಟ್ಟರು. (ಮಾಡಿದರು.) ॥ ೪೯ ॥

ಚರ್ತುರ್ಗುಣೈರನಧಿಕೌ ತನಯಾರ್ಥಮೇವ ಮಾದ್ರ್ಯಾಕೃತೌ ಸುರವರಾವಧಿಕೌ ಸ್ವತೋಽಪಿ ।
ತೇನೈವ ಭರ್ತೃ ಮೃತಿಹೇ ತುರಭೂತ್ಸಮಸ್ತಲೋಕೈಶ್ಚ ನಾತಿಮುಹಿತಾಸುಗುಣಾಽಪಿ ಮಾದ್ರೀ ॥ ೫೦ ॥

ಅನ್ವಃ- ನಿಜದೋಷಂ=ಎಂಬುದಾಗಿ ಹೇಳಿದ್ದನ್ನು ಈಗ ವಿವರಿಸುವರು. ಮಾದ್ರ್ಯಾ=ಮಾದ್ರಿಯಿಂದ ಭರ್ತುಃ=ಗಂಡನ ದೆಸೆಯಿಂದ ಗುಣೈಃ=ಗುಣಗಳಿಂದ ಅನಧಿಕಾ=ಉತ್ತಮರಲ್ಲದ ಸ್ವತಃ=ತನ್ನಿಂದ ಅಧಿಕಾ=ಉತ್ತಮರಾದ ಸುರವರೌ=ಅಶ್ವಿನೀ ದೇವತೆಗಳು ತನಯಾರ್ಥಂ ಏವ=ಮಕ್ಕಳಾಗುವುದಕ್ಕೋಸ್ಕರವೇ ಕೃತೌ=ಸ್ವೀಕರಿಸಲ್ಪಟ್ಟರು. ಅತಃ=ಆದ್ದರಿಂದಲೇ ಮಾದ್ರ್ಯಾಂ ಸುಗುಣಾಪಿ=ಒಳ್ಳೆಗುಣ ಉಳ್ಳವಳಾದರೂ ಸಮಸ್ತಲೋಕೈಃ=ಎಲ್ಲಾ ಜನರಿಂದ ನಾತಿಮುಹಿತಾ = ಅತೀಪೂಜೆಸಲ್ಪಡಲಿಲ್ಲ.॥೫೦॥

ಪಾಂಡೋಃ ಸುತಾಃ ಮುನಿಗಣೈಃ ಪಿತೃಮೇಧಮತ್ರ ಚಕ್ರುರ್ಯಥಾವದಥ ತೇನ ತಯೈವ ಮಾದ್ರೀ ।
ಹುತ್ವಾತ್ಮ ದೇಹಮುರು ಪಾಪಮದಃ ಕೃತಂ ಚ ಸಮ್ಮಾರ್ಜ್ಯ ಲೋಕಮುಗಮನ್ನಿಜಭರ್ತುರೇವ ॥ ೫೧ ॥

ಅನ್ವಃ- ಪಾಂಡೋಃ ಸುತಾಃ=ಪಾಂಡವರು ಅತ್ರ=ಈ ವ್ಯಾಸಾಶ್ರಮದಲ್ಲಿ ಮುನಿಗಣೈಃ ಸಹ=ಮುನಿವೃಂದದಿಂದ ಕೂಡಿಕೊಂಡು ಪಿತೃಮೇಧಂ = ದೇಹದಾಹಾದಿ ಕ್ರಿಯೆಯನ್ನು ಯಥಾವತ್ = ಶಾಸ್ತ್ರೋಕ್ತ ರೀತಿಯಲ್ಲಿ ಚಕ್ರುಃ=ಮಾಡಿದರು. ಮಾದೀ=ಮಾದ್ರಿಯು ತೇನ=(ಪಾಂಡುವಿನಿಂದ ಸಹೈವ) ಪಾಂಡುವಿನ ಸಂಡಲ್ಪಡತಕ್ಕ ದೇಹದಿಂದ ಸಹೈವ=ಕೂಡಿಕೊಂಡೇ ಆತ್ಮದೇಹಂ=ತನ್ನ ಶರೀರವನ್ನು ಹುತ್ವಾ=ಸುಟ್ಟು ಅದಃ ಕೃತಂ=ಈ ಜನ್ಮದಲ್ಲಿ ಮಾಡಲ್ಪಟ್ಟ ಉರುಪಾಪಂ=ಸ್ವಲ್ಪ ಪ್ರಾಯಶ್ಚಿತ್ತದಿಂದ ನಿವಾರಿಸಲು ಅಶಕ್ಯವಾದ ಅಶ್ವಿನೀದೇವತೆಗಳ ಸಂಬಂಧದಿಂದ ಉಂಟಾದ ಪಾಪವನ್ನು ಸಮ್ಮಾರ್ಜ್ಯ=ನಿವಾರಿಸಿ ನಿಜಭರ್ತೃಲೋಕಮೇವ=ತನ್ನ ಗಂಡನ ಲೋಕವನ್ನೇ ಆಗಾತ್=ಹೊಂದಿದಳು. ॥ ೫೧ ॥

ಪಾಂಡೋಶ್ಚ ಪುತ್ರಕಗಣೈಃ ಸ್ವಗುಣೈಶ್ಚ ಸಾಕ್ಷಾತ್ ಕೃಷ್ಣಾತ್ಮಜಃ ಸತತಮಸ್ಯ ಪದೈಕ ಭಕ್ತಃ ।
ಲೋಕಾನಪಾಪ ವಿಮಲಾನ್ಮಹಿತಾನ್ಮಹದ್ಭಿಃ ಕಿಂ ಚಿತ್ರಮತ್ರ ಹರಿಪಾದ ವಿನಮ್ರ ಚಿತ್ತೇ ॥ ೫೨ ॥

ಅನ್ವಃ- ಸಾಕ್ಷಾತ್=ಕೃಷ್ಣಾತ್ಮಜಃ=ವೇದವ್ಯಾಸದೇವರ ಔರಸ ಪುತ್ರನಾದ ಪಾಂಡುಶ್ಚ=ಪಾಂಡುವಾದರೂ ಸ್ವ ಗುಣೈಃ= ತನ್ನ ಒಳ್ಳೆಯ ಗುಣಗಳಿಂದಲೂ ಪುತ್ರಕಗುಣೈಶ್ಚ=ಮಕ್ಕಳಾದ ಪಾಂಡವರ ಸುಗುಣಗಳಿಂದಲೂ ಸತತಂ=ಯಾವಾಗಲೂ ಅಸ್ಯ=ಈ ವೇದವ್ಯಾಸ ದೇವರ ಪದೈಕ ಭಕ್ತಃ=ಪಾದದಲ್ಲಿ ಬಹಳ ಭಕ್ತಿ ಉಳ್ಳವನಾಗಿದ್ದರಿಂದ ಮಹದ್ಭಿಃ=ದೊಡ್ಡವರಿಂದ ಮಹಿತಾನ್=ಪೂಜಿಸಲ್ಪಟ್ಟ ಲೋಕಾನ್=ಲೋಕಗಳನ್ನು ಅವಾಪ=ಹೊಂದಿದನು. ಹರಿಪಾದವಿನಮ್ರಚಿತ್ತೇ=ಪರಮಾತ್ಮನ ಪಾದಗಳಲ್ಲಿ ಭಕ್ತಿ ಉಳ್ಳ ಮನಸ್ಸುಳ್ಳ ಅತ್ರ=ಈ ಪಾಂಡುವಿನಲ್ಲಿ ಚಿತ್ರಂ ಕಿಂ=ವಿನಾದರೂ ಆಶ್ಚರ್ಯವಲ್ಲ. ॥ ೫೨ ॥

ಪಾಂಡೋಃ ಸುತಾಶ್ಚ ಪೃಥಯಾ ಸಹಿತಾ ಮುನೀಂದ್ರೈರ್ನಾರಾಯಣಾಶ್ರಮತ ಆಶು ಪುರಂ ಸ್ವಕೀಯಂ।
ಜಗ್ಮುಸ್ತಥೈವ ಧೃತರಾಷ್ಟ್ರಪುರೋ ಮುನೀಂದ್ರಾ ವೃತ್ತಂ ಸಮಸ್ತಮವದನ್ನನುಜಂ ಮೃತಂ ಚ ॥೫೩॥

ಅನ್ವಃ- ಪೃಥಾಯ ಸಹಿತಾಃ ಚ=ಕುಂತಿಯಿಂದ ಕೂಡಿದ ಪಾಂಡವರಾದರೂ ಮುನೀಂದ್ರೈಃ ಸಹಿತಾಃಸಂತಃ=ಮುನಿಶ್ರೇಷ್ಠರಿಂದ ಕೂಡಿದವರಾಗಿ ನಾರಾಯಣಾಶ್ರಮತಃ=ನಾರಾಯಣಾಶ್ರಮದಿಂದ ಸ್ವಕೀಯಂ=ತಮ್ಮ ಪುರಂ=ಪಟ್ಟಣವನ್ನು ಜಗ್ಮುಃ=ಹೋದರು ತಥೈವ=ಹಾಗೆಯೇ ಮುನೀಂದ್ರಾಃ=ಮುನಿಪುಂಗವರು ಧೃತರಾಷ್ಟ್ರಪುರಃ=ಧೃತರಾಷ್ಟ್ರನ ಮುಂಭಾಗದಲ್ಲಿ ವೃತ್ತಂ ಸಮಸ್ತಂ=ಸಂಭವಿಸಿದ ಎಲ್ಲಾ ಘಟನೆಗಳನ್ನು ಅನುಜಂ=ತಮ್ಮನಾದ ಪಾಂಡುವನ್ನು ಮೃತಂ ಚ = ಸತ್ತವನನ್ನಾಗಿಯೂ ಅವದನ್=ಹೇಳಿದರು. ॥ ೫೩ ॥

ತೂಷ್ಣೀಂ ಸ್ಥಿತೇ ಚ ನೃಪತೌ ತನುಜೇ ಚ ನದ್ಯಾಃ ಕ್ಷತ್ತರ್ಯುತಾತ್ತ ಉರುವೋದಮತೀವ ಪಾಪಾಃ ।
ಊಚುಃ ಸುಯೋಧನಮುಖಾಃ ಸಹ ಸೌಬಲೇನ ಪಾಂಡೋರ್ಮೃತಿಃ ಕಿಲ ಪುರಾತನಯಾಃ ಕ್ವತಸ್ಯ ॥ ೫೪॥

ಅನ್ವಃ:- ನೃಪತೌ=ರಾಜನಾದ ಧೃತರಾಷ್ಟ್ರನು ತೂಷ್ಣೀಂ ಸ್ಥಿತೇಸತಿಃ=ಸುಮ್ಮನೆ ಇರುತ್ತಿರಲು ನದ್ಯಾಃ ತನುಜೇ = ನದೀ ಸುತ ಭೀಷ್ಮರು ತೂಷ್ಣೀಂ= ಸ್ಥಿತೇಸತಿ=ಸುಮ್ಮನೆ ಇರುತ್ತಿರಲು ಕ್ಷತ್ತರಿ ಚ=ವಿದುರನೂ ಕೂಡ ಅತೀವ=ಅತ್ಯಂತವಾಗಿ ಉರುವೋದಂ = ಉತ್ಕೃಷ್ಟವಾದ ಸಂತೋಷವನ್ನು ಆತ್ತೇಸತಿ=ಹೊಂದುತ್ತಿರಲು ಪಾಪಾಃ=ಪಾಪಿಷ್ಟರಾದ ಸುಯೋಧನ ಮುಖಾಃ=ದುರ್ಯೋಧನನೇ ಮೊದಲಾದವರು (ಧಾರ್ತರಾಷ್ಟ್ರರು) ಸೌಬಲೇನ ಸಹ=ಸುಬಲರಾಜ ಸುತ ಶಕುನಿಯಿಂದ ಕೂಡಿಕೊಂಡು ಪಾಂಡೋರ್ಮೃತಿಃ=ಪಾಂಡುರಾಜನಿಗೆ ಸಾವು ಪುರಾಃ=ಮುಂಕ್ಕಳು ಹುಟ್ಟುವ ಪೂರ್ವದಲ್ಲಪ್ಪೇ ತಸ್ಯ=ಆ ಪಾಂಡುವಿಗೆ ತನಯಾಃ=ಮಂಕ್ಕಳು ಕ್ವ=ಎಲ್ಲಿ? (ಇರಲಿಲ್ಲ) ॥ ೫೪ ॥

ನಕ್ಷೇತ್ರಜಾ ಅಪಿ ಮೃತೇಪಿತರಿ ಸ್ವಕೀಯೈಃ ಸಮ್ಯಜ್ ನಿಯೋಗಮನವಾಪ್ಯ ಭವಾಯ ಯೋಗ್ಯಾಃ ।
ತೇಷಾಮಿತೀರಿತ ವಚೋನುಜಗಾದ ವಾಯುಃ ಆ ಭಾಷ್ಯ ಕೌರವ ಗಣಾನ್ ಗಗನಸ್ಥ ಏವ ॥ ೫೫ ॥

ಅನ್ವಃ:- ಜೌರಸ ಪುತ್ರರಲ್ಲಿದಿದ್ದರೆ ಕ್ಷೇತ್ರಜ ಪುತ್ರರಾಗಬಹುದು ಎಂಬ ಶಂಕೆಗೆ ಉತ್ತರಿಸುತ್ತಾರೆ. ಜೌರಸ ಅಂದರೆ ತನ್ನದೇ ವೀರ್ಯದಿಂದ ಹುಟ್ಟಿದವರು. ಕ್ಷೇತ್ರಜ ತನ್ನ ಹೆಂಡತಿಯಲ್ಲಿ ತನ್ನಂದ ಹಿರಿಯರಿಂದ ಹುಟ್ಟಿದವರು.

ಪಿತರಿ=ಮೃತೇಸತಿ = ತಂದೆ ಸಾಯುತ್ತಿರಲು ಸ್ವಕೀಯೈಃ=ತಂದೆಯ ಬಾಂಧವರಿಂದ ಸಮ್ಯಜ್ಞಿಯೋಗಂ ಅನವಾಪ್ಯ= ಚೆನ್ನಾಗಿ ಪ್ರೀತಿ ಪೂರ್ವಕವಾಗಿ ಅನುಜ್ಞೆಯನ್ನು ಹೊಂದದೆ,ಭವಾಯ=ಹೆಂಡತಿಯಲ್ಲಿ ಸಂತತಿಯನ್ನು ಹುಟ್ಟಿಸಲು ಯೋಗ್ಯಾಃ ನ=ಅನರ್ಹರು ಇತಿ=ಎಂಬುದಾಗಿ ವಾಚಂ=ಮಾತನ್ನು ಹೇಳಿದರು. ವಾಯುಃ = ವಾಯುದೇವರು ಗಗನಸ್ಥ ಏವಸನ್=ಆಕಾಶದ ಲ್ಲೇ ಇದ್ದುಕೊಂಡು ತೇಷಾಂ=ಆ ದುರ್ಯೋಧನಾದಿಗಳ ಇತೀರಿತಂ=ಈ ಹಿಂದೆ ಹೇಳಿದ ಪ್ರಕಾರದ ಮಾತನ್ನು ಅನುಜಗಾದಃ= ಅನುಸರಿಸಿಯೇ ಹೇಳಿದರು. ॥ ೫೫ ॥

ಏತೇ ಹಿ ಧರ್ಮಮುರುದಿಂದ್ರಭಿಷಗ್ವರೇಭ್ಯೋ ಜಾತಾಃ ಪ್ರಜೀವತಿ ಪಿತರ್ಯುರುಧರ್ಮಸಾರಾಃ ।
ಶಕ್ಯಾಶ್ಚ ನೈವ ಭವತಾಂ ಕ್ವದಗ್ರಹಾಯ ನಾರಾಯಣೇನ ಸತತಂ ಪರಿರಕ್ಷತಾ ಯತ್ ॥ ೫೬ ॥

ಅನ್ವಃ:- ಉರುಧರ್ಮಸಾರಾಃ=ಉತ್ಕೃಷ್ಟನಾದ ಭಗವಂತನಿಗೆ ಪ್ರೀತಿಕರವಾದ ಧರ್ಮಾಚರಣೆ ಉಳ್ಳ ಆದ್ದರಿಂದ ಶ್ರೇಷ್ಠ ರಾದ ಏತೇ=ಈ ಪಾಂಡವರು ಪಿತರಿ=ತಂದೆಯು ಪ್ರಜೀವತಿ ಸತಿ=ಬದುಕಿಕೊಂಡಿರುತ್ತಿರಲು ಧರ್ಮ...ಭ್ಯಃಧರ್ಮ=ಯಮ ಧರ್ಮರಾಯನಂ ಮರುತ್=ಪ್ರಧಾನವಾಯುವು ಇಂದ್ರ=ದೇವೇಂದ್ರನು ಭಿಷಗ್ವರೇಭ್ಯಃ=ಅಶ್ವಿನೀ ದೇವತೆಗಳಾದ ಇವರಿಂದ ಜಾತಾಃ=ಹುಟ್ಟಿರುತ್ತಾರೆ. ಯತ್=ಯಾವ ಕಾರಣದಿಂದ ನಾರಾಯಣೇನ=ಶ್ರೀಮನ್ನಾರಾಯಣನಿಂದ ಸತತಂ=ಸದಾ ಕಾಲವು ಪರಿರಕ್ಷಿತಾಃ=ವಿಶೇಷವಾಗಿ ರಕ್ಷಿಸಲ್ಪಟ್ಟಿರುತ್ತಾರೆ. ಅತಃ=ಆದ್ದರಿಂದ ಭವತಾಂ = ನಿಮ್ಮೆಲ್ಲರ ಆಗ್ರಹಾಯ=ಬಲತ್ಕಾರಕ್ಕೆ ಯೋಗ್ಯಾಃ=ಅರ್ಹರು ನೈವ=ಆಗಲಾರರೇ ಹಿ=ಶ್ರುತಿಪ್ರಸಿದ್ಧ. ॥ ೫೬ ॥

ವಾಯೋರದೃಶ್ಯ ವಚನಂ ಪರಿಶಂಕಮಾನೇಷ್ವಾವಿರ್ಬಭೂವ ಭಗವಾನ್ ಸ್ವಯಮುಜ್ಜನಾಭಃ ।
ವ್ಯಾಸ ಸ್ವರೂಪ ಉರುಸರ್ವಗುಣೈಕದೇಹ ಆದಾಯ ತಾನಗಮದಾಶುಚ ಪಾಂಡವ ಗೇಹಂ ॥ ೫೭ ॥

ಅನ್ವಃ:- ತೇಷಂ=ಆ ಧೃತರಾಷ್ಟ್ರಾದಿಗಳು ವಾಯೋಃ=ವಾಯುದೇವರ ಅದೃಶ್ಯವಚನಂ=ಅದೃಶ್ಯ ವಾಣಿಯನ್ನು ಪರಿಶಂ ಮಾನೇಷುಸತ್ಸು=ಮಾಡಬೇಕೋ ಬೇಡವೋ ಎಂಬುದಾಗಿ ಸಂಶಯ ಪಡುತ್ತಿರಲು, ವ್ಯಾಸಸ್ವರೂಪಃ=ವ್ಯಾಸರೂಪಿಯಾದ ಭಗವಾನ್=ಷಡ್ಗುಣೈರ್ಯ ಸಂಪನ್ನನಾದ ಅಬ್ಜನಾಭಃ=ಶ್ರೀಮನ್ನಾರಾಯಣನು, ಆವಿರ್ಬಭೂವ=ಪ್ರತ್ಯಕ್ಷನಾದನು. ಉರು ಸರ್ವಗುಣೈಕದೇಹಃ = ಶೋಭನಗಳಾದ ಸಮಸ್ತ ಗುಣಗಳೇ ಶರೀರವಾಗಿ ಉಳ್ಳ ಸಃ=ಆ ವ್ಯಾಸದೇವರು ಚ=ಪಾದುರ್ಭೂತ ರಾದರಲ್ಲದೇ ತಾನ್=ಆ ಪಾಂಡವರನ್ನು ಹಿಡಿದುಕೊಂಡು ಆಶು=ಬೇಗನೆ ಪಾಂಡುಗೇಹಂ=ಪಾಂಡುವಿನ ಮನೆಗೆ ಅಗಮತ್ = ಹೋದರು. ॥ ೫೭ ॥

ತತ್ ಸ್ವೀಕೃತೇಷು ಸಕಲಾ ಅಪಿ ಭೀಷ್ಮಮುಖ್ಯಾಃ ವೈಚಿತ್ರವೀರ್ಯ ಸಹಿತಾಃ ಪರಿಪೂಜ್ಯ ಸರ್ವಾನ್ ।
ಕುಂತ್ಯಾಸಹೈವ ಜಗೃಹುಃ ಸುಭೃಶಾ ತದಾರ್ತಾ । ವೈಚಿತ್ರವೀರ್ಯತನಯಾಃ ಸಹ ಸಬಲೇನ ॥ ೫೮ ॥

ಅನ್ವ- ತೇಷು= ಆ ಪಾಂಡವರು ತತ್ ಸ್ವೀಕೃತೇಷು ಸತ್ಸು=ವ್ಯಾಸದೇವರಿಂದ ಪರಿಗೃಹೀತರಾಗುತ್ತಿರಲು ವೈಚಿತ್ರವೀರ್ಯ ಸಹಿತಾಃ=ವಿಚಿತ್ರವೀರ್ಯ ಸುತ ಧೃತರಾಷ್ಟ್ರನಿಂದ ಕೂಡಿದ ಸಕಲಾಃ ಭೀಷ್ಮಮುಖ್ಯಾಃ ಅಪಿ = ಎಲ್ಲಾ ಭೀಷ್ಮರೇ ಪ್ರಧಾನರಾಗಿ ಉಳ್ಳ ಹಿರಿಯರು. ಕುಂತ್ಯಾ ಸಹೈವ=ಕುಂತಿಯಿಂದ ಕೂಡಿಕೊಂಡು ತಾನ್ ಸರ್ವಾನ್ ಆ ಎಲ್ಲಾ ಪಾಂಡವರನ್ನು ಪರಿಪೂಜ್ಯ = ಚೆನ್ನಾಗಿ ಪೂಜೆಮಾಡಿ ಜಗೃಹುಃ=ಸ್ವೀಕರಿಸಿದರು ॥ ೫೮ ॥

ವೈಚಿತ್ರವೀರ್ಯತನಯಾಃ ಕೃಪತೋ ಮಹಾಸ್ತ್ರಾಣ್ಯಾಪುಶ್ಚ ಪಾಂಡುತನಯೈಃ ಸಹಸರ್ವರಾಜ್ಞಾಂ ।
ಪುತ್ರಾಶ್ಚತತ್ರ ವಿವಿಧಾ ಅಪಿ ಬಾಲಚೇಷ್ಟಾಃ ಕುರ್ವತ್ಸು ವಾಯುತನಯೇನಜಿತಾಃ ಸಮಸ್ತಾಃ ॥ ೫೯ ॥

ಅನ್ವಃ- ವೈಚಿತ್ರವೀರ್ಯತನಯಾಃ=ಧಾರ್ತರಾಷ್ಟ್ರರು (ಧೃತರಾಷ್ಟ್ರನ ಮಕ್ಕಳು) ಪಾಂಡುತನಯೈಃ ಸಹ=ಪಾಂಡು ಪುತ್ರರಿಂದ ಕೂಡಿಕೊಂಡು ಸರ್ವರಾಜ್ಞಾಂ=ಎಲ್ಲಾ ರಾಜರ ಪುತ್ರಾಶ್ಚ=ಮಕ್ಕಳೂ ಕೂಡ ಕೃಪತಃ=ಕೃಪಾಚಾರ್ಯರಿಂದ ಮಹಾಸ್ತ್ರಾಣಿ=ಉತ್ತಮ ಅಸ್ತ್ರಗಳನ್ನು ಆಪುಃ=ಹೊಂದಿದರು. ತತ್ರ=ಆ ವಿದ್ಯೆಯನ್ನು ಕಲಿಯುವ ಸಮಯದಲ್ಲಿ ತೇಷಾಂ=ಆ ರಾಜರುಗಳು ವಿವಿಧಾಃ=ನಾನಾ ಬಗೆಯ ಚೇಷ್ಟಾಃ=ಆಟಗಳನ್ನು ಕುರ್ವತ್ಸು=ಮಾಡುತ್ತಿರಲು ಸಮಸ್ತಾಶ್ಚ=ಎಲ್ಲರೂ ಕೂಡ ವಾಯುತನಯೇನ=ವಾಯುಸುತ ಭೀಮಸೇನನಿಂದ ಜಿತಾಃ=ಪರಾಜಿತರಾದರು. ॥ ೫೯ ॥

ಪಕ್ವೋರುಭೋಜ್ಯಫಲಸನ್ನಯನಾಯ ವೃಕ್ಷೇಷ್ವಾರೂಢ ರಾಜತನಯಾನಭಿವೀಕ್ಷ್ಯ ಭೀಮಃ ।
ಪಾದಪ್ರಹಾರ ಮುರು ವೃಕ್ಷತಲೇ ಪ್ರದಾಯ ಸಾಕಂ ಫಲೈರ್ವಿನಿಪತತ್ಸು ಫಲಾನ್ಯಭುಂಕ್ತ ॥ ೬೦ ॥

ಅನ್ವಃ- ಭೀಮಃ=ಧರಿಸಲ್ಪಟ್ಟ ಸಕಲವೇದ ಪ್ರಮಾಣ ಉಳ್ಳ ಭೀಮನು ಪಕ್ವೋ...ಯ ಪಕ್ವ=ಹಣ್ಣಾದ ಉರು=ಉತ್ಕೃಷ್ಟಗಳಾದ ಫಲ=ಹಣ್ಣುಗಳನ್ನು ಸನ್ನಯನಾಯ=ಕೆಳಗೆ ತರುವುದಕ್ಕೋಸ್ಕರ ವೃಕ್ಷೇಷು=ಮರಗಳಲ್ಲಿ ಆರೂಢರಾಜತನಯಾನ್=ಮೇಲಕ್ಕೆ ಹತ್ತಿದ ರಾಜಕುಮಾರರನ್ನು ಅಭಿವೀಕ್ಷ್ಯ=ನೋಡಿ ಉರು ಪಾದ ಪ್ರಹಾರಂ=ಗಟ್ಟಿಯಾದ ಒದೆತವನ್ನು ವೃಕ್ಷತಲೇ = ಮರದ ಮೂಲದಲ್ಲಿ ಪ್ರದಾಯ = ಕೊಟ್ಟು ತೇಷು = ರಾಜಕುಮಾರರು ಫಲೈಃಸಾಕಂ = ಹಣ್ಣುಗಳಿಂದ ಕೂಡಿಕೊಂಡು ವಿನಿಪತತ್ಸು = ಕೆಳಗೆ ಬೀಳುತ್ತಿರಲು ಫಲಾನಿ = ಹಣ್ಣುಗಳನ್ನು ಅಭುಂಕ್ತ = ತಿಂದನು. ॥ ೬೦ ॥

ಯುದ್ಧೇನಿಯುದ್ಧ ಉತ ಧಾವನ ಉತ್ ಪ್ಲವೇ ಚ ಪಾರಿಪ್ಲವೇಚ ನಿಖಿಲಾನ್ ಸಹಿತಾನ್ ಕುಮಾರಾನ್ ।
ಏಕೋ ಜಿಗಾಯ ತರಸಾ ಪರಮಾರ್ಯಕರ್ಮಾ ವಿಷ್ಣೋಃ ಸುಪೂರ್ಣ ಸದನುಗ್ರಹತಃ ಸುನಿತ್ಯಾತ್ ॥೬೧॥

ಅನ್ವಃ- ಯುದ್ಧೇ=ದಂಡಯುದ್ಧ ಮುಂತಾದ ಯುದ್ಧಗಳಲ್ಲಿ ನಿಯುದ್ಧೇ=ಮುಷ್ಟಿ ಯುದ್ಧದಲ್ಲಿ ಧಾವನೇ = ಜಡುವಿಕೆಯಲ್ಲಿ ಉತ್ಪ್ಲವೇ = (High Jump) ಮೇಲಕ್ಕೆ ಹಾರುವುದರಲ್ಲಿ ಉತ = ಮತ್ತು ಪಾರಿಪ್ಲವೇಚ = ತೋಳುಗಳಿಂದ ನದಿಗಳನ್ನು ದಾಟುವುದು ಮುಂತಾದ ನೀರಿನಲ್ಲಿನ ಕ್ರೀಡೆಯಲ್ಲಿಯೂ ಕೂಡ ನಿಖಿಲಾನ್= ಎಲ್ಲಾ ಸಹಿತಾನ್ = ಒಟ್ಟಿಗೆ ಸೇರಿದ ಕುಮಾರಾನ್ = ಮಕ್ಕಳನ್ನು ಏಕಃ = ಒಂಟಿಯಾಗಿ ತರಸಾ = ವೇಗದಿಂದ ಪರಮಾರ್ಯಕರ್ಮಾ = ಶ್ರೇಷ್ಠವಾದ. ಪೂಜ್ಯವಾದ ಕೆಲಸ ಉಳ್ಳ ಭೀಮಸೇನ ದೇವರು ವಿಷ್ಣೋಃ = ಶ್ರೀಮನ್ನಾರಾಯಣನ ಸುನಿತ್ಯಾತ್ ಅನಾದಿ ಅನಂತ ಕಾಲದಿಂದ ಇರತಕ್ಕ ಸುಪೂರ್ಣಸದನುಗ್ರಹಾತ್ = ಪರಿಪೂರ್ಣವಾದ ಒಲ್ಮೆಯ ಅನುಗ್ರಹದಿಂದಾಗಿ ಜಿಗಾಯ = ಗೆದ್ದರು. ॥ ೬೦ ॥

ಸರ್ವಾನ್ ಪ್ರಗೃಹ್ಯವಿನಿಮಜ್ಜತಿ ವಾರಿಮಧ್ಯೇ ಶ್ರಾಂತಾನ್ ವಿಸೃಜ್ಯ ಹಸತಿಸ್ಮ ಸ ವಿಷ್ಣುಪದ್ಯಾಂ ।
ಸರ್ವಾನುದೂಹ್ಯ ಚ ಕದಾಚಿದುರುಪ್ರಹಾಂ ಗಂಗಾಂ ಸ ತಾರಯತಿ ಸಾರಪೌರ್ಣಸುಂಸ್ಯಃ ॥ ೬೧ ॥

ಅನ್ವಃ- ಸಃ = ಆ ಭೀಮಸೇನನು ವಿಷ್ಣುಪದ್ಯಾಂ = ಗಂಗಾ ನದಿಯಲ್ಲಿ ವಾರಿಮಧ್ಯೇ = ನೀರಿನ ಮಧ್ಯದಲ್ಲಿ ಸರ್ವಾನ್ = ಎಲ್ಲಾ ರಾಜಕುಮಾರರನ್ನು ಪ್ರಗೃಹ್ಯ = ಹಿಡಿದುಕೊಂಡು ವಿನಿಮಜ್ಜತಿ = ಮುಳುಗಿಸುತ್ತಾನೆ. ಶ್ರಾಂತಾನ್= ಬಳಲಿದ ರಾಜ

ಕುಮಾರರನ್ನು ವಿಸೃಜ್ಯ=ಬಿಟ್ಟು ಹಸತಿಸ್ಮ=ನಗಾಡುತ್ತಿದ್ದನು. ಚ=ಮತ್ತು ಸರ್ವಾನ್=ಎಲ್ಲಾ ರಾಜಕುಮಾರರನ್ನು ಉದೂಹ್ಯ=
ಪೊತ್ತುಕೊಂಡು ಕದಾಚಿತ್=ಒಮ್ಮೊಮ್ಮೆ ಉರುಪ್ರವಾಹಾಂ=ಉತ್ಕಲಷ್ಟ ಪ್ರವಾಹ ಉಳ್ಳ ಗಂಗಾಂ=ಗಂಗೆಯನ್ನು ಸಾರಸು
ಪೂರ್ಣಪೌಂಸ್ಯಃ = ಶ್ರೇಷ್ಠವಾದ. ಪರಿಪೂರ್ಣವಾದ ಪೌರುಷ ಉಳ್ಳ ಭೀಮನು ತಾರಯಂತಿಸ್ಮ=ದಾಟಿಸುತ್ತಿದ್ದನು ॥ ೬೪ ॥

ದ್ವೇಷಂ ಹ್ಯೃತೇ ನಹಿ ಹರೌ ತಮಸಿ ಪ್ರವೇಶಃ ಪ್ರಾಣೇಚ ತೇನ ಜಗತೀಮನು ತೌ ಪ್ರಪನ್ನೌ ।
ತತ್ಕಾರಣಾನ್ಯಕುರುತಾಂ ಪರಮೌ ಕರಾಂಸಿ ದೇವದ್ವಿಷಾಂ ಸತತವಿಸ್ಮೃತ ಸಾಧುಪೌಂಸ್ಯೌ ॥ ೬೫ ॥

ಅನ್ವಯಃ- ದೇವದ್ವಿಷಾಂ=ಅಸುರರಿಗೆ ಹರೌ=ನಾರಾಯಣನಲ್ಲಿ ಪ್ರಾಣೇಚ=ಮುಖ್ಯಪ್ರಾಣನಲ್ಲಿಯೂ ದ್ವೇಷಂಯಂತೇ=ದ್ವೇಷ
ವನ್ನು ಮಾಡದೆ ತಮಸಿಪ್ರವೇಶಃ = ತಮಸ್ಸಿಗೆ ಪ್ರವೇಶವು ನ ಹಿ=ಆಗಲಾರದಷ್ಟೆ ತೇನ=ಆ ಕಾರಣದಿಂದಲೇ ಜಗತೀಂ =
ಜಗತ್ತಿಗೆ ಅನು=ಇಬ್ಬರೂ ಒಟ್ಟಿಗೆ ಸೇರಿ ಪ್ರಪನ್ನೌ=ಬಂದಿರುವ ಸತತ ವಿಸ್ಮೃತ ಸಾಧುಪೌಂಸ್ಯೌ=ಯಾವಾಗಲೂ ಪರಿಪೂರ್ಣ
ವಾದ ನಿರ್ದೋಷವಾದ ಪೌರುಷ ಉಳ್ಳ ಪರಮೌ=ಉತ್ತಮರಾದ ಪರಿವಾಯಂಗಳು ತತ್ಕಾರಣಾನಿ=ಆ ದ್ವೇಷಕ್ಕೆ ನಿಮಿತ್ತಗ
ಳಾದ ಕರಾಂಸಿ = ಕೆಲಸಗಳನ್ನು ಅಕುರುತಾಂ=ಮಾಡಿದರು. ॥ ೬೫ ॥

ದೃಷ್ಟ್ವಾವಿತಾನ್ಯಥ ಕರಾಂಸಿ ಮರುತ್ಸುತೇನ ನಿತ್ಯಂಕೃತಾನಿ ತನಯಾ ಅಖಿಲಾಶ್ಚರಾಜ್ಞಾಂ ।
ತಸ್ಯಾವಿತಂ ಬಲಮುದೀಕ್ಷ್ಯಸದೋರುವೃದ್ಧ ದ್ವೇಷಾಬಭೂವುರಥ ಮಂತ್ರಮಮಂತ್ರಯಂಶ್ಚ ॥ ೬೬ ॥

ಅನ್ವಯಃ- ಅಥ=ಅನಂತರ ರಾಜ್ಞಾಂ=ರಾಜರುಗಳ ಅಖಿಲಾಶ್ಚ ತನಯಾ=ಸಂಪೂರ್ಣ ಕುಮಾರರು ಮರುತ್ಸುತೇನಕೃತಾನಿ=
ವಾಯುಪುತ್ರನಯ ಭೀಮನಿಂದ ಮಾಡಲ್ಪಟ್ಟ ಅವಿಮಿತಾನಿ ಕರಾಂಸಿ= ಬಹಳಗಳಾದ ಕರ್ಮಗಳನ್ನು ದೃಷ್ಟ್ವಾವ=ನೋಡಿ ತಸ್ಯಾ=
ಆ ಭೀಮನ ಅವಿಮಿತಂ=ಅಪರಿಮಿತವಾದ ಬಲಂ=ಸಾಮರ್ಥ್ಯವನ್ನು ಉದೀಕ್ಷ್ಯ=ನೋಡಿ ಸದೋರುವೃದ್ಧದ್ವೇಷಾಃ=ನಿತ್ಯದಲ್ಲಿ
ಗನ್ನಾಗಿ ಬೆಳೆದ ದ್ವೇಷ ಉಳ್ಳವರು ಬಭೂವುಃ=ಆದರು. ಅಥ = ಹೀಗೆ ದ್ವೇಷ ಬೆಳೆದ ನಂತರ ಮಂತ್ರಂ=ವಿಚಾರವನ್ನು
(ರಹಸ್ಯ ಸಭಯನ್ನು) ಭೀಮನನ್ನು ಹೇಗೆ ಕೊಲ್ಲುವುದು ಎಂಬ ವಿಷಯವನ್ನು ಅಮಂತ್ರಯಂತ=ವಿಚಾರ ಮಾಡಿದರು. ॥೬೬॥

ಯೆಯೇ ಹಿ ತತ್ರ ನರದೇವಸುತಾಃ ಸುರಾಂಶಾಃ ಪ್ರೀತಿಂ ಪರಾಂ ಪವನಜೇ ನಿಖಿಲಾ ಅಕುರ್ವನ್ ।
ತಾಂಸ್ತಾನ್ ವಿಹಾಯ ದಿತಿಜಾ ನರದೇವವಂಶಜಾತಾ ವಿಚಾರ್ಯವಧನಿಶ್ಚಯಮಸ್ಯಚಕ್ರುಃ ॥ ೬೭ ॥

ತತ್ರ=ಆ ರಾಜರ ಮಧ್ಯದಲ್ಲಿ ಯೇಯೇ=ಯಾರು ಯಾರು ನರದೇವಸುತಾ=ರಾಜಕುಮಾರರು ಸುರಾಂಶಾಃ=
ದೇವತೆಗಳ ಅವತಾರಭೂತರೋ ತೇತೇನಿಖಿಲಾಃ=ಅವರೆಲ್ಲರೂ ಪವನಜೇ=ಗಾಳಿಸುತ ಭೀಮನಲ್ಲಿ ಪರಾಂಪ್ರೀತಿಂ=ಉತ್ತಮ
ಪ್ರೀತಿಯನ್ನು ಚಕ್ರುಃ=ಮಾಡಿದರು. ತಾನ್ ತಾನ್=ಆ ಎಲ್ಲಾ ಸಂಭೂತರಾದವರನ್ನು ವಿಹಾಯ=ಬಿಟ್ಟು ಯೇ=ಯಾರು
ದಿತಿಜಾ = ದೈತ್ಯರು ನರದೇವವಂಶಜಾತಾಃ=ರಾಜವಂಶದಲ್ಲಿಹುಟ್ಟಿದ್ದಾರೋ ತೇನಿಖಿಲಾಅಪಿ=ಅವರೆಲ್ಲರೂಕೂಡ ವಿಚಾರ್ಯ=
ವಿಚಾರವಿನಿಮಯ ಮಾಡಿಕೊಂಡು ಅಸ್ಯ=ಈ ವಾಯುದೇವರ ಅವತಾರರಾದ ಭೀಮಸೇನ ದೇವರ ವಧನಿಶ್ಚಯಂ=ಕೊಲ್ಲಲಂ
ತೀರ್ಮಾನವನ್ನು ಚಕ್ರುಃ=ಮಾಡಿದರು. ಹಿ=ಆಶ್ಚರ್ಯ. ॥ ೬೭ ॥

ಅಸ್ಮಿನ್ ಹತೇ ವಿನಿಹತಾ ಅಖಿಲಾಶ್ಚ ಪಾರ್ಥಾಃ ಶಕ್ಯೋಬಲಾಚ್ಚ ನ ನಿಹಂತುಮಯಂ ಬಲಾಢ್ಯಃ ।
ಛದ್ಮಪ್ರಯೋಗತ ಇಮಂ ವಿನಿಹತ್ಯವೀರ್ಯಾತ್ ಪಾರ್ಥಂ ನಿಹತ್ಯ ನಿಗಡೇ ಚವಿದದ್ಮಹೇನ್ಯಾನ್ ॥೬೮॥

ಅಸ್ಮಿನ್=ಈ ಭೀಮಸೇನನು ವಿನಿಹತೇ=ಕೊಲ್ಲಲ್ಪಡುತ್ತಿರಲಂ ಅಖಿಲಾಶ್ಚ ಪಾರ್ಥಾಃ = ಎಲ್ಲಾ ಪಾಂಡವರು ನಿಹತಾಃ
=ಸಾಯಿಸಿದವರಂತೆ ಬಲಾಢ್ಯಃ = ಬಲಿಷ್ಠನಾದ ಅಯಂ=ಈ ಭೀಮನು ಬಲಾಚ್ಚ=ಬಲಪ್ರಯೋಗದಿಂದಲೂ ನಿಹಂತುಂ=
ಕೊಲ್ಲಲು ನಶಕ್ಯಃ=ಸಾಧ್ಯವಾಗಲಾರನು. ಅತ=ಆದ್ದರಿಂದ ಅಷ್ಟು ಬಲಿಷ್ಠನಾದ್ದರಿಂದ ಇಮಂ = ಈ ಭೀಮಸೇನನನ್ನು
ಛದ್ಮಪ್ರಯೋಗತಃ=ಮಂತ್ರೌಷಧಾದಿ ಮಾಟವನ್ನು ಉಪಯೋಗಿಸಿ ವಿನಿಹತ್ಯ=ಕೊಂದು ವೀರ್ಯಾತ್=ಅತೀ ಪರಾಕ್ರಮ
ದಿಂದ ಪಾರ್ಥಂ=ಅರ್ಜುನನನ್ನು ವಿನಿಹತ್ಯ=ಕೊಂದು ಅನ್ಯಾನ್ಚ=ಬೇರೆ ಯುಧಿಷ್ಠಿರಾದಿ ಮೂವರನ್ನಾದರೋ ನಿಗಡೈ=
ಬಂಧನದಲ್ಲಿ ವಿದಿದ್ಮಹೇ=ಇಡುವೆವು.

ಏವಂ ಕೃತೇನಿಹತ ಕಂಟಕಮಸ್ಯರಾಜ್ಯಂ ದುರ್ಯೋಧನಸ್ಯ ತು ಭವೇನ್ನತತೋನ್ಯಥಾಸ್ಯಾತ್ ।

ಅಸ್ಮಿನ್ ಹತೇನಿಪತಿತೇಚ ಸುರೇಂದ್ರಸೂನೌ ಶೇಷಾಃ ಭವೇಯುರಥಸೌಬಲಿ ಪುತ್ರದಾಸಾಃ ॥ ೬೯ ॥

ಏವಂ=ಈ ರೀತಿಯಾಗಿ ಕೃತೇ=ಮಾಡಲ್ಪಡುತ್ತಿರಲು ಅಸ್ಯ=ಈ ದಾವ ದುರ್ಯೋಧನಸ್ಯ=ದುರ್ಯೋಧನನಿಗೆ ನಿಹತಕಂಟಕಮ್=ನಾಶಮಾಡಲ್ಪಟ್ಟ ತೊಂದರೆಗಳುಳ್ಳ ರಾಜ್ಯಂ=ರಾಜ್ಯವು ಭವೇತ್=ಆದೀತು. ತತಃ ಅನ್ಯಥಾ=ನಾವು ವಿಚಾರಿಸಿದ್ದನ್ನು ಮಾಡದಿದ್ದ ಪಕ್ಷದಲ್ಲಿ ಅಸ್ಯ=ಈ ದುರ್ಯೋಧನನಿಗೆ ನಿಷ್ಕಂಟಕಮ್ ರಾಜ್ಯಂ=ನಿರ್ವಿಘ್ನವಾದ ರಾಜ್ಯವು ನಸ್ಯಾತ್=ಆಗಲಾರದು. ಅಸ್ಮಿನ್=ಈ ಭೀಮಸೇನನು ಹತೇ=ಕೊಲ್ಲಲ್ಪಡುತ್ತಿರಲು ಸುರೇಂದ್ರಸೂನೌ ಚ=ಇಂದ್ರನ ತೇಸತಿ= ಮಗನಾದ ಅರ್ಜುನನು ಕೂಡ ಕೊಲ್ಲಲ್ಪಡುತ್ತಿರಲು ಶೇಷಾಃ=ಉಳಿದ ಮೂವರು ಸೌಬಲಿಪುತ್ರದಾಸಾಃ=ಗಾಂದಾರೀ ಪುತ್ರ ಸುಯೋಧನನ ಸೇವಕರು ಭವೇಯುಃ=ಆಗುವರು.

ಏವಂ ವಿಚಾರ್ಯವಿಷಮುಲ್ಬಣಮಂತಕಾಭಂ ಕ್ಷೀರೋದಧೇರ್ಮಥನಜಂ ತಪಸಾ ಗಿರೀಶಾತ್ ।

ಶುಕ್ರೇಣ ಲಬ್ಧಮಮುತಃ ಸುಬಲಾತ್ಮಜೇನ ಪ್ರಾಪ್ತಂ ಪ್ರತೋಷ್ಯ ಮರುತಸ್ತನಯಾಯ ಚಾದುಃ ॥೭೦॥

ತೇ=ಆ ರಾಜರು ಏವಂ=ಹಿಂದೆ ಹೇಳಿದ ಪ್ರಕಾರವಾಗಿ ವಿಚಾರ್ಯ = ಆಲೋಚನೆ ಮಾಡಿ ಕ್ಷೀರೋದಧೇರ್ಮಥನ ಜಂ=ಹಾಲುಗಡಲಿನ ಕಡೆಯುವಿಕೆಯಿಂದ ಹುಟ್ಟಿದ ಉಲ್ಬಣಂ=ಬಹು ಕಟುವಾದ ಅಂತಕಾಭಂ ಯಮ ಸದೃಶವಾದ ಶುಕ್ರೇಣ= ಶುಕಾಚಾರ್ಯರಿಂದ ಗಿರೀಶಾತ್=ರುದ್ರ ಪ್ರಸಾದದಿಂದ ಲಬ್ಧಂ=ಹೊಂದಲ್ಪಟ್ಟ ಸುಬಲಾತ್ಮಜೇನ=ಶಕುನಿಯಿಂದ ಪ್ರತೋ- ಷ್ಯ=ಶುಕ್ರನನ್ನು ಸಂತೋಷಪಡಿಸಿ ಅಮುತಃ=ಈ ಶುಕ್ರಾಚಾರ್ಯರಿಂದ ಪ್ರಾಪ್ತಂ=ಹೊಂದಲ್ಪಟ್ಟ ವಿಷಂಚ=ವಿಷವನ್ನು ಕೂಡ ಮರುತ್ತನಯಾಯ=ವಾಯುಸುತ ಭೀಮನಿಗೆ ಅದುಃ=ಕೊಟ್ಟರು. ॥ ೭೦ ॥

ಸಮ್ಮಂತ್ರ್ಯ ರಾಜತನಯೈಃ ಧೃತರಾಷ್ಟ್ರಜೈಸ್ತು ದತ್ತಂ ಸ್ವಸೂದಮುಖತೋಽಖಿಲಭಕ್ಷ್ಯಭೋಜ್ಯೈ ।

ಜ್ಞಾತ್ವಾ ಯುಯುತ್ಸುಗದಿತಂ ಬಲವಾನ್ಸ ಭೀಮಃ ವಿಷ್ಣೋರನುಗ್ರಹ ಬಲಾ ಜ್ಜರಯಾಂ ಚಕಾರ ॥೭೧॥

ಅನ್ವಃ- ಬಲವಾನ್ = ಬಲಿಷ್ಠನಾದ ಭೀಮಃ=ಭೀಮಸೇನನು ರಾಜತನಯೈಃಸಹ ಸಂಮ್ಮಂತ್ರ್ಯ=ರಾಜಕುಮಾರರಿಂದ ಒಟ್ಟಿಗೆ ಆಲೋಚಿಸಿ ಧೃತರಾಷ್ಟ್ರಜೈಃ=ದುರ್ಯೋಧನ ಮುಂತಾದವರಿಂದ ಸ್ವಸೂದಮುಖಿತಃ=ಭೀಮನಿಗೆ ಅಡಿಗೆ ಮಾಡತಕ್ಕವನಿಂದ (ಅವನ ಮೂಲಕ) ಅಖಿಲಭಕ್ಷ್ಯಭೋಜ್ಯೈ=ಎಲ್ಲಾ ತಿನ್ನತಕ್ಕ ಭಕ್ಷ್ಯದಲ್ಲಿ ಸಂಯೋಜ್ಯ=ಸೇರಿಸಿ ದತ್ತಂ=ಕೊಡಲ್ಪಟ್ಟ ಯಯುತ್ಸು ಗದಿತಂ= ಯುಯುತ್ಸುವಿನ ಮೂಲಕ ಜ್ಞಾತ್ವಾ ಅಪಿ=ತಿಳಿದೂ ಕೂಡ ಅಭಕ್ಷ್ಯತ=ತಿಂದನಾ ಚ=ಮತ್ತು ವಿಷ್ಣೋರನುಗ್ರ ಹಬಲಾತ್=ಶ್ರೀವಿಷ್ಣುನಾರಾಯಣ ಅನುಗ್ರಹ ಸಾಮರ್ಥ್ಯದಿಂದ ಜರಯಾಂ ಚಕಾರ=ಕರಗಿಸಿದನು. ॥ ೭೧ ॥

ಜೀರ್ಣೇ ವಿಷೇ ಕುಮತಯಃ ಪರಮಾಭಿತಪ್ತಾಃ ಪ್ರಾಸಾದಮಾಶು ವಿದಧುರ್ಹಂಪಾದ ತೋಯೇ ।

ಜ್ಞಾತ್ವಾಯುಯುತ್ಸುಮುಖತಃ ಸ್ವಯಮುತ್ರ ಚಾಂತೇ ಸುಷ್ವಾಪ ಮಾರುತಿರಮಾ ಧೃತರಾಷ್ಟ್ರಪುತ್ರೈಃ॥೭೨॥

ಅನ್ವಃ- ವಿಷೇ=ವಿಷವು ಜೀರ್ಣೇಸತಿ=ಜೀರ್ಣವಾಡಲ್ಪಡುತ್ತಿರಲು ಪರಮಾಭಿತಪ್ತಾಃ ಕುಮತಯಃ=ಅತ್ಯಂತ ಸಂತಾಪವನ್ನು ಹೊಂದಿದ ದುರ್ಬುದ್ಧಿಗಳಾದ ಆ ದುರ್ಯೋಧನಾದಿಗಳು ಆಶು=ಬೇಗನೇ ಹರಿಪಾದ ತೋಯೇ=ಗಂಗಾ ನೀರಿನಲ್ಲಿ ಆಶು= ಬೇಗನೇ ಪ್ರಾಸಾದಂ=ಒಂದು ರೀತಿಯ ಮನೆಯನ್ನು ವಿದಧುಃ=ರಚಿಸಿದರು. ಮಾರುತಿಃ=ವಾಯುಸುತ ಭೀಮನು ಯುಯುತ್ಸು ತ್ಸುಮುಖಿತಃ= ಯುಯುಯುತ್ಸುವಿನಮೂಲಕ ಜ್ಞಾತ್ವಾ=ಧೃತರಾಷ್ಟ್ರ ಸುತಾದಿಗಳ ಆಲೋಚನೆಯನ್ನು ತಿಳಿದು ಧೃತರಾಷ್ಟ್ರ ಪುತ್ರೈಃ ಅಮಾ=ವೈಚಿತ್ರವೀರ್ಯಮಕ್ಕಳೊಂದಿಗೆ ಸ್ವಯಂ=ತಾನಾಗಿಯೇ=ಯಾರು ಹೇಳದೇ ಅತ್ರ=ಈ ಗಂಗಾತೀರದ ಪ್ರಾಸಾದದಲ್ಲಿ ಅಂತೇ=ಕೊನೆಗೆ ಸುಷ್ವಾಪ=ಮಲಗಿದನು. ॥ ೭೨ ॥

ದೋಷಾನ್ ಪ್ರಕಾಶಯಿತುಮೇವ ವಿಚಿತ್ರವೀರ್ಯ ಪುತ್ರಾತ್ಮಜೇಷು ನೃವರಂ ಪ್ರತಿಸುಪ್ತಮೀಕ್ಷ್ಯ ।

ಬಧ್ವಾಭಿಮಂತ್ರ್ಯ ಋಣದೃಢೈರಯಸಾ ಕೃತೈಸ್ತಂ ಪ್ರಾಸೈರ್ವಿಚಿ ಕಿಪುರುದೇ ಹರಿಪಾದಜಾಯಾಃ ॥ ೭೩ ॥

ಅನ್ವಃ- ವಿಚಿತ್ರವೀರ್ಯಪುತ್ರಾತ್ಮಚೇಷು=ವಿಚಿತ್ರವೀರ್ಯನ ಮೊಮ್ಮಕ್ಕಳಾದ ದುರ್ಯೋಧನಾದಿಗಳಲ್ಲಿ ದೋಷಾನ್= ದೋಷಗಳನ್ನು ಪ್ರಕಾಶಯಿತುಮೇವ=ತೋರಿಸುವುದಕ್ಕೋಸ್ಕರವೇ ಸ್ವಪಂ ; ಚಕಾರ=ನಿದ್ರೆ ಮಾಡಿದನು. ತದಾ=ಆಗ ದುರ್ಯೋದಿನಾದ್ಯಾಃ=ದುರ್ಯೋಧನಾದಿಗಳು ಸ್ವವರಂ=ವೃಕೋದರನನ್ನು ಪ್ರತಿಸುಪ್ತಂ=ನಿದ್ರೆ ಮಾಡಿದವನನ್ನಾಗಿ ಈಕ್ಷ್ಯ= ನೋಡಿ ಅಭಿಮಂತ್ರಣದೃಢೈಃ=ಮಂತ್ರಿಸಿದ್ದುದರಿಂದ ಗಟ್ಟಿಗಳಾದ ಆಯಸಾಕೃತೈಃ=ಕಬ್ಬಿಣದಿಂದ ರಚಿತಗಳಾದ ಪಾಶೈಃ= ಪಗ್ಗಗಳಿಂದ ಬಧ್ವಾ=ಕಟ್ಟಿ ಹರಿಪಾದಜಾಯಾಃ ಉದೇ=ಗಂಗಾನದಿಯ ನೀರಿಗೆ ವಿಚಿಕ್ಷಿಪುಃ=ಬಿಸಾಡಿದರು. ॥ ೭೩ ॥

ತತ್ ಕೋಟಿಯೋಜನ ಗಭೀರ ಮುದಂ ವಿಗಾಹ್ಯಭೀಮೋ ವಿಜೃಂಭಣತಃ ಏವ ವಿವೃಶ್ಚ್ಯ ಪಾಶಾನ್ ।
ಉತ್ತೀರ್ಯ ಸಜ್ಜನ ಗಣಸ್ಯ ವಿಧಾಯ ಹರ್ಷಂ ತಸ್ಥೌ ಅನಂತ ಗುಣವಿಷ್ಣು ಪದಾತಿಹಾರ್ದಃ ॥ ೭೪ ॥

ಅನ್ವಃ- ಅನಂತಗುಣವಿಷ್ಣು ಪದಾತಿಹಾರ್ದಃ=ಅಪರಿಮಿತ ಗುಣ ಉಳ್ಳ ವಿಷ್ಣುವಿನಲ್ಲಿ ಯಾವಾಗಲೂ ಮನಸ್ಸುಳ್ಳ ಭೀಮಃ=ಭೀಮಸೇನನು ತತ್=ಆದಾವ ಕೋಟಿಯೋಜನ ಗಭೀರ ಮುದಂ=ಕೋಟಿ ಯೋಜನ ಆಳವಾದ ನೀರನ್ನು ವಿಗಾಹ್ಯ=ಇಳಿದು ವಿಜೃಂಭಣತಏವಃ=ಆಕಳಿಕೆಯಿಂದಲೇ ಪಾಶಾನ್=ಕಬ್ಬಿಣದ ಸಂಕೋಲೆ ಮುಂತಾವುಗಳನ್ನು ವಿವೃಶ್ಚ್ಯ= ನಾಶ ಮಾಡಿ ಉತ್ತೀರ್ಯ=ನೀರನ್ನು ದಾಟಿ ಬಂದು, ಸಜ್ಜನಗಣಸ್ಯ=ಸಜ್ಜನ ಜನಾಂಗಕ್ಕೆ ಹರ್ಷಂ=ಸಂತೋಷವನ್ನು ವಿಧಾಯ=ಮಾಡಿದವನಾಗಿ ತಸ್ಥೌ=ನಿಂತನು. ॥ ೭೪ ॥

ತಂ ವೀಕ್ಷ್ಯ ದುಷ್ಟಮನಸೋತಿ ವಿಷಣ್ಣ ಚೇತಾಃ ಸಂಮತ್ರ್ಯಭೂಯ ಉರುನಾಗ ಗಣಾನಥಾಷ್ಟೌ ।
ಶುಕ್ರೋಕ್ತಮಂತ್ರಬಲತಃ ಪುರ ಆಹ್ವಯಿತ್ವಾ ಪಶ್ಚಾತ್ಸುಪಂಚರಗತಾನ್ ಪ್ರದದುಃ ಸ್ವಸೂತೇ ॥ ೭೫ ॥

ಅನ್ವಃ- ತಂ=ಆ ಗಂಗಾನದಿಯಿಂದ ಮೇಲಕ್ಕೆ ದುಮುಕಿ ಬಂದ ಭೀಮನನ್ನು ವೀಕ್ಷ್ಯ=ನೋಡಿ ಅತಿವಿಷಣ್ಣಚೇತಾಃ=ಅತ್ಯಂತ ಸಂತಪ್ತ ಹೃದಯ ಉಳ್ಳ ದುಷ್ಟ ಮನಸಃ = ಕೆಟ್ಟ ಹೃದಯ ಉಳ್ಳವರು ಭೂಯಃ = ಮತ್ತು ಸಂಮತ್ರ್ಯ = ವಿಚಾರಿಸಿ ಅಥ = ಅನಂತರ ಶುಕ್ರೋಕ್ತ ಮಂತ್ರಬಲಿತಃ = ಶುಕ್ರಾಚಾರ್ಯರಿಂದ ಹೇಳಲ್ಪಟ್ಟ ಮಂತ್ರ ಸಾಮರ್ಥ್ಯದಿಂದ ಅಷ್ಟೌ = ಎಂಟು ಸಂಖ್ಯಾತಗಳಾದ ಉರುನಾಗಗಣಾನ್= ಉತ್ಕೃಷ್ಟ ಸರ್ಪ ಸಮೂಹವನ್ನು ಪುರಃ = ನಾಗ ಪಟ್ಟಣದ ಪರಿಸರಕ್ಕೆ ಆಹ್ವಯಿತ್ವಾ = ಕರೆತಂದು, ಪಶ್ಚಾತ್ = ಅನಂತರ ಸುಪಂಜರಗತಾನ್ = ಪಂಜರದಲ್ಲಿರತಕ್ಕವುಗಳನ್ನಾಗಿ ಕೃತ್ವಾ = ಮಾಡಿ ಸೂತೇ = ದುರ್ಯೋಧನ ಸಾರಥಿಯು ವಶಕ್ಕೆ ಪ್ರದದುಸ್ಮ = ಕೊಟ್ಟರು. ॥ ೭೫ ॥

ದುರ್ಯೋಧನೇನ ಪೃಥುಮಂತ್ರ ಬಲೋಪಹೂತಾನ್ ತತ್ ಸಾರಥಿಃ ಫಣಿಗಣಾನ್ ಪವನಾತ್ಮಜಸ್ಯ ।
ಸುಪ್ತಸ್ಯ ವಿಸ್ತೃತ ಉರಸ್ಯಮುಚ ದ್ವಿಶೀರ್ಣದಂತಾ ಬಭೂವುರಮುಮಾಶು ವಿದಶ್ಯ ನಾಗಾಃ ॥ ೭೬ ॥

ಅನ್ವಃ- ಬಲೋಪಹೂ ದುರ್ಯೋಧನೇನ=ದುರ್ಯೋಧನನಿಂದ ಪೃಥುಮಂತ್ರ ಬಲೋಪಹೂತಾನ್ = ಬಹಳಗಳಾದ ಮಂತ್ರಗಳ ಸಾಮರ್ಥ್ಯದಿಂದತರಲ್ಪಟ್ಟ ಫಣಿಗಣಾನ್ = ನಾಗ ಸಮೂಹವನ್ನು ತತ್ಸಾರಥಿಃ = ಆ ದುರ್ಯೋದನನ ಸಾರ ಥಿಯು ಸಂಪ್ರಸ್ಯ=ಮಲಗಿರುವ ಪವನಾತ್ಮಜಸ್ಯ = ವಾಯುಸುರ ಭೀಮಸೇನ ದೇವರ ವಿಸ್ತೃತಉರಸಿ = ವಿಶಾಲ ವೃಕ್ಷ ಸ್ಥಳ ವಲ್ಲಿ ಅಮುಚತ್ =ಬಿಟ್ಟನು. ನಾಗಾಃ=ಆ ನಾಗಗಳು ಅಮುಂ = ಈ ಭೀಮನನ್ನು ವಿದಶ್ಯ = ಕಚ್ಚಿ ವಿಶೀರ್ಣದಂತಾಃ= ತುಂಡಾದ ಹಲ್ಲುಳ್ಳವುಗಳು ಆಶು = ಆಗಲೇ ಬಭೂವುಃ = ಆದವು. ॥ ೭೬ ॥

ಕ್ಷಿಪ್ತ್ವಾ ಸುದೂರ ಮುರುನಾಗಗಣಾನಥಾಷ್ಟೌ ತದ್ವಂಶಜಾನ್ ಸ ವಿನಿಹತ್ಯ ಪಿಪೀಲಿಕಾವತ್ ।
ಜಘ್ನೇ ಚ ಸೂತಮುಪಹಸ್ತತಃ ಏವ ಭೀಮಃ ಸುಷ್ಟ್ವಾಪ ಪೂರ್ವವದನುಸ್ಥಿತ ಏವ ತಲ್ಪಾತ್ ॥ ೭೭ ॥

ಅನ್ವಃ- ಅಷ್ಟೌ = ಎಂಟು ಸಂಖ್ಯಾಕಗಳಾದ ನಾಗಾನ್ = ಸರ್ಪಗಳನ್ನು ಭೀಮಃ = ಆ ಭೀಮನು ಸೂದೂರಂ = ಬಹು ದೂರಕ್ಕೆ ಕ್ಷಿಪ್ತ್ವಾ = ಬಿಸಾಡಿ ತದ್ವಂಶಜಾನ್ ಉರುನಾಗಗಣಾನ್ = ಅವುಗಳ ವಂಶದಲ್ಲಿ ಹಬ್ಬಿದ ಶ್ರೇಷ್ಠ ಸರ್ಪ

ಸಮೂಹವನ್ನು ಪಿಪೀಲಿಕಾವತ್=ಇರುವೆಗಳನ್ನೆಂಬಂತೆ ವಿನಿಹತ್ಯ=ಕೊಂದು ಅಥ=ಅನಂತರ ಅಪಹಸ್ತತಃ ಏವ=ಅಂಗೈಯಿಂದಲೇ ಸೂತಂ=ಸಾರಥಿಯನ್ನು ಜಘ್ನೇ=ಕೊಂದನು ಅಥ=ಅನಂತರ ತಲ್ಪಾತ್=ಹಾಸಿಗೆಯಿಂದ ಅನವಸ್ಥಿತಃ ಸನ್=ಏಳದೇ ಇರುವವನಾಗಿ ಪೂರ್ವವದೇವ = ಹಿಂದಿನಂತೆಯೇ ಸಂಪ್ಲಾವ=ಮಲಗಿದನು. ॥ ೭೭ ॥

ತತ್ತಸ್ಯ ನೈಜ ಬಲಮುಪ್ರತಿಮಂ ನಿರೀಕ್ಷ್ಯ ಸರ್ವೇ ಕ್ಷಿತೀಶತನಯಾಃ ಅಧಿಕಂ ವಿಷೇದುಃ ।
ನಿಶ್ವಾಸತೋ ದರ್ಶನಾದಪಿ ಭಸ್ಮಯೇಷಾಂ ಭೂಯಾಸುರೇವ ಭುವನಾನಿ ಚ ತೇ ಮೃಷಾಸನ್ ॥ ೭೮ ॥

ಅನ್ವಯಃ- ತದಪ್ರತಿಮಂ=ಈ ಹಿಂದೆ ಹೇಳಿದ ಪ್ರಕಾರದಂತೆ ಅಸದೃಶವಾದ ತಸ್ಯ ಆ ಭೀಮಸೇನ ದೇವರ ಬಲಂ=ಸಾಮರ್ಥ್ಯವನ್ನು ನಿರೀಕ್ಷ್ಯ=ನೋಡಿ ಸರ್ವೇ=ಎಲ್ಲಾ ಕ್ಷಿತೀಶತನಯಾ ಅಪಿ=ರಾಜಕುಮಾರರೂ ಕೂಡ ಅಧಿಕಂ=ಬಹಳವಾಗಿ ವಿಷೇದುಃ = ವ್ಯಥೆಪಟ್ಟರು ಯೇಷಾಂ=ಯಾವ ನಾಗಗಳ ನಿಶ್ವಾಸತಃ = ಜೋರಾಗಿ ಶ್ವಾಸ ಬಿಡುವುದರಿಂದ ದರ್ಶನಾದಪಿ= ಕೇವಲ ನೋಟದಿಂದಲೂ ಭುವನಾನಿಚ=ಮೂರು ಲೋಕಗಳೂ ಕೂಡ ಭಸ್ಮ=ಬೂದಿಯು ಭೂಯಾಸುಃ=ಆಗ ತ್ತಿದ್ದವೋ ತೇಽಪಿ=ಅಂತಹ ನಾಗಗಳೂ ಕೂಡ ಅತ್ರ=ಈ ಭೀಮಸೇನನನ್ನು ಕೊಲ್ಲುವ ವಿಷಯದಲ್ಲಿ ಮೃಷಾ=ವ್ಯರ್ಥೋದ್ಯೋಗ ಉಳ್ಳವರು ಆಸನ್=ಆದರು. ॥ ೭೮ ॥

ದದ್ಭಿರ್ವಿದಶ್ಯನವಿಕಾರ ಮಮುಷ್ಯ ಕರ್ತುಂ ಶೇಕುರ್ ಭುಜಂಗಮ ವರಾಃ ಅಪಿ ಸುಪ್ರಯತ್ನಾತ್ ।
ಕಸ್ಯಾಪಿ ನೇದೃಶಬಲಂ ಶ್ರುತಪೂರ್ವಮಾಸೀತ್ ದೃಷ್ಟಂ ಕಿಮುಸ್ಮ ತನಯೇಪಿ ಹಿರಣ್ಯಕಸ್ಯ ॥ ೭೯ ॥

ಅನ್ವಯಃ- ಭುಜಂಗಮವರಾಃ=ನಾಗಕುಲಶ್ರೇಷ್ಠರಾದ ಅನಂತ ವಾಸುಕ್ಯಾದಿ ನಾಗಗಳೂ ಕೂಡ ಸುಪ್ರಯತ್ನಾತ್ ಅಪಿ= ಒಳ್ಳೆ ಪ್ರಯತ್ನದಿಂದಲೂ ಕೂಡ ದದ್ಭಿಃ=ಹಲ್ಲುಗಳಿಂದ ವಿದಶ್ಯ=ಕಚ್ಚಿ ಯಂ=ಯಾವ ಭೀಮನನ್ನು ವಿಕಾರಂ = ಬದಲಾವಣೆಯನ್ನು ಕರ್ತುಂ=ಮಾಡಲು ನಶೇಕುಃ=ಸಮರ್ಥರಾಗಲಿಲ್ಲವೋ ಕಸ್ಯಾಪಿ=ಯಾರಿಗೂ ಕೂಡ ಈದೃಶಂ ಬಲಂ=ಭೀಮಸೇನನಿಗೆ ಇದ್ದಿರುವ ಬಲವು ಶ್ರುತಪೂರ್ವಂ ನಾಸೀತ್=ಕಿವಿಗೋಚರವಾಗಿಲ್ಲ ಹಾಗಾದರೆ ಪ್ರಹ್ಲಾದನಿಗೆ ಹೀಗೆ ದೈತ್ಯರು ~~ಪೀಡೆತೊಟ್ಟಾಗ ಅವನು ತಪ್ಪಿಸಿಕೊಂಡ ಎಂದಿದೆ ಆದ್ದರಿಂದ ಅವನಲ್ಲಿ ಈ ರೀತಿಯ ಬಲ ಕಂಡಿದೆ ಎಂದರೆ ಇಲ್ಲ ಎಂದು~~ ಉತ್ತರಿಸುತ್ತಾರೆ ಹಿರಣ್ಯಕಸ್ಯ ತನಯೇಪಿ=ಹಿರಣ್ಯಕಶಿಪುವಿನ ಸುತ ಪ್ರಹ್ಲಾದನಲ್ಲಿ ಕೂಡ ಈದೃಶಂ=ಭೀಮನಲ್ಲಿದ್ದಂತಹ ಸ್ವಾಭಾವಿಕ ಬಲ ನಶ್ರುತಪೂರ್ವಂ=ಇದ್ದುದು ಕೇಳಿ ಬರುವುದಿಲ್ಲ (ಕೇಳಿಬರುವುದಿಲ್ಲ ಎಂದರೆ ಅದು ಕಾಣಲಿಕ್ಕೆ ಸಾಧ್ಯವೆ? ಎಂಬುದನ್ನು ಹೇಳುತ್ತಾರೆ) ನದೃಷ್ಟಂ=ಕಂಡಿಲ್ಲ ಎಂದು ಕಿಮು=ಏನು ಹೇಳತಕ್ಕದ್ದು ಸ್ಮ=ಪುರಾಣಪ್ರಸಿದ್ಧ. ॥ ೭೯ ॥

ಸ್ವಾತ್ಮಾವನಾರ್ಥಮಧಿಕಾಂ ಸ್ತುತಿಮೇವ ಕೃತ್ವಾ ವಿಷ್ಣೋಃ ಸ ದೈತ್ಯತನಯೋ ಹರಿಣಾವಿತೋ ಭೂತ್ ।
ನ ತ್ವೌರಸಂ ಬಲಮಸ್ಯ ಸಕೃತ್ಯತೇಹಿ ಭೃತ್ಯೈರ್ಬಲಾತ್ ಸ್ವಪಿತು ರೌರಸಮಸ್ಯವೀರ್ಯಂ ॥ ೮೦ ॥

ಹಾಗಾದರೆ ಪ್ರಹ್ಲಾದನ ಬಲಕ್ಕೂ ಭೀಮನ ಬಲಕ್ಕೂ ಏನು ವ್ಯತ್ಯಾಸ ಎಂದರೆ ಹೇಳುತ್ತಿದ್ದಾರೆ.

ಅನ್ವಯಃ- ಸಃ ದೈತ್ಯತನಯಃ=ಆ ದೈತ್ಯಸುತ ಪ್ರಹ್ಲಾದನು ಸ್ವಾತ್ಮಾವನಾರ್ಥಂ = ತನ್ನ ರಕ್ಷಣೆಗೋಸ್ಕರವಾಗಿ ಅಧಿಕಾಂ= ಬಹಳವಾದ ವಿಷ್ಣೋಃ=ಶ್ರೀ ಕೃಷ್ಣನ ಸ್ತುತಿಂ=ಸ್ತೋತ್ರವನ್ನು ಕೃತ್ವಾ=ಮಾಡಿ ಹರಿಣೈವ=ವಿಷ್ಣುವಿನಿಂದಲೇ (ಸ್ವಾಭಾವಿಕವಾಗಿ ಅಲ್ಲಿ) ಅವಿತಃ=ರಕ್ಷಿಸಲ್ಪಟ್ಟವನು ಅಭೂತ್=ಆದನು. [ಅವನದ್ದು ಸ್ವಾಭಾವಿಕ ಬಲ ಅಲ್ಲ ಎಂಬುದನ್ನು ಸಾಧಿಸಿ ತೋರಿಸಿರುವರು] ಹಿ=ಯಾವ ಕಾರಣದಿಂದ ಪಿತುಃ=ತಂದೆ ಹಿರಣ್ಯಕಶಿಪುವಿನ ಭೃತ್ಯೈಃ=ಸೇವಕರಿಂದ ಬಲಾತ್ = ಬಲಾತ್ಕಾರದಿಂದ ಕೃಷ್ಯತೇ=ಎಳೆಯಲ್ಪಡುತ್ತಾನೋ ತತ್=ಆ ಕಾರಣದಿಂದ ಅಸ್ಯಬಲಂ=ಈ ಪ್ರಹ್ಲಾದನ ಬಲವು ಔರಸಂ = ಎದೆಯಾಳದಿಂದ ಬಂದದ್ದು (ಸ್ವಾಭಾವಿಕವಾದದ್ದು) ನ=ಅಲ್ಲ ಅಸ್ಯ=ಈ ಭೀಮನ ಬಲಂ=ಸಾಮರ್ಥ್ಯವು ಔರಸಂ ಎದೆಯಾಳದಿಂದ ಬಂದದ್ದು (ಸ್ವಾಭಾವಿಕವಾದದ್ದು) ॥ ೮೦ ॥

ನೈಸರ್ಗಿಕ ಪ್ರಿಯವಿನುಂ ಪ್ರವದಂತಿ ವಿಪ್ರಾಃ ವಿಷ್ಣೋರ್ನಿತಾಂತಮಪಿ ಸತ್ಯಮಿದಂ ಧ್ರುವಂ ಹಿ ।
ನೈವಾನ್ಯಥೌರಸಬಲಂ ಭವತೀದೃಶಂ ತತ್ ಉತ್ಪಾದ್ಯ ಏ ಹರಿಣೈವ ಸಹೈಷ ನೋರ್ಥಃ ॥ ೮೧ ॥

ಅನ್ವಃ- ವಿಪ್ರಾಃ=ವೇದಜ್ಞರಾದ ಬ್ರಾಹ್ಮಣರು ಏವಂ=ಈ ಭೀಮಸೇನನನ್ನು ವಿಷ್ಣೋಃ=ಶ್ರೀಮನ್ನಾರಾಯಣನಿಗೆ ನಿತಾಂತಂ ಪ್ರಿಯಂ ಮಪಿ=ಬಹಳ ಪ್ರೀತಿಗೆ ಪಾತ್ರನಾದರೂ (ಹೆಚ್ಚು ಪ್ರೀತಿಪಾತ್ರನೆಂದರೆ ಅವನು ವಿಷ್ಣು ಏನನ್ನಾದರೂ ಇಚ್ಛಿಸುವನೋ ಎಂದರೆ) ನೈಸರ್ಗಿಕ ಪ್ರಿಯಂ=ನಿರುಪಾಧಿಕವಾಗಿ ಪ್ರೀತಿಉಳ್ಳವನನ್ನಾಗಿ ಪ್ರವದಂತಿ=ಹೇಳುತ್ತಾರೋ ಹಿ=ಯಾವ ಕಾರಣದಿಂದ ಅನ್ಯಥಾ ವಿಷ್ಣುವಿನ ಪ್ರಸಾದ ಇಲ್ಲದೆ ಇದ್ದರೆ ಈದೃಶಂ ಔರಸಂ ಬಲಂ ನಭವತಿ=ಈ ರೀತಿಯಾದ ಸ್ವಾಭಾವಿಕ ಬಲವು ಇರಲಾರದು ತತ್=ಆದ್ದರಿಂದ ಇದಂ=ಈ ಬ್ರಾಹ್ಮಣರು ಹೇಳಿದ್ದು ಧ್ರುವಂ ನಿಶ್ಚಯವಾಗಿ ಸತ್ಯಂ=ಯಥಾರ್ಥವಾದದ್ದು ತತ್=ಯಥಾರ್ಥವಾದ ಸ್ವಾಭಾವಿಕವಾಗಿ ಬಲ ಇದ್ದರಿಂದ (ಹರಿಯ ಅನುಗ್ರಹ ಇದ್ದದರಿಂದ) ಹರಿಣಾಸಹ ವಿಷಃ=ಕೃಷ್ಣನಿಂದ ಕೂಡಿಸಿ ಈ ಭೀಮನು ಉತ್ಪಾದ್ಯಃ=ನಾಶವಾಡಲು ಯೋಗ್ಯನು ವಿಷಃ=ಇದೇ ನಃ = ನಮ್ಮ ಅರ್ಥಃ= ಪ್ರಯೋಜನವು ॥ ೮೧ ॥

ಕೃಷ್ಣಃ ಕಿಲೈಹ ಸ ಹರಿರ್ಯದುಷು ಪ್ರಜಾತಃ ಸೋಸ್ಯಾಶ್ರಯಃ ಎರುತಃ ತಸ್ಯ ಬಹುಪ್ರತೀಪಂ ।
ಸಂಮುಂತ್ರ್ಯ ಚೈವಮತಿಪಾಪತಮಾಃ ನರೇಂದ್ರ ಪುತ್ರಾ ಹರೇಶ್ಚ ಬಹು ಚಕ್ರುರಥ ಪ್ರತೀಪಮ್ ॥ ೮೨ ॥

ಹಿಂದೆ ಹರಿಯು ಉತ್ಪಾದ್ಯ ಎಂದು ಹೇಳಿದೆ ಲೋಕಾಂತರದಲ್ಲಿರುತಕ್ಕ ಹರಿಗೆ ಹೇಗೆ ಉತ್ಪಾದ್ಯತ್ವ ಎಂದರೆ.

ಅನ್ವಃ- ಯದುಷು ಪ್ರಜಾತಃ=ಯದುವಂಶದಲ್ಲಿ ಹುಟ್ಟಿದ ವಿಷಃ ಕೃಷ್ಣಃ=ಈದಾವ ಶ್ರೀಕೃಷ್ಣನು ಹರಿಶ್ಚ=ವೈಕುಂಠಸ್ಥ ಶ್ರೀಹರಿಯೇ ಆಷ್ಟೆ ಸಃ=ಆ ಶ್ರೀಕೃಷ್ಣನು ಅಸ್ಯ=ಈದಾವ ಭೀಮನಿಗೆ ಆಶ್ರಯಃ=ಆಧಾರನು ತಸ್ಯ=ಆ ಶ್ರೀಕೃಷ್ಣನಿಗೆ ಬಹು ಪತೀಪಂ=ಬಹಳವಾದ ವೈರವನ್ನು ಕುರುತ=ಮಾಡಿರಿ ಏವಂ=ಈ ರೀತಿಯಾಗಿ ಸಂಮ್ಮಂತ್ರ್ಯ=ಆಲೋಚನೆ ಮಾಡಿ ಅತಿಪಾಪತಮಾಃ=ಅತೀ ಪಾಪಿಗಳಾದ ನರೇಂದ್ರ ಪುತ್ರಾಶ್ಚ=ರಾಜಕುಮಾರರಾದರೂ ಹರೇಶ್ಚ=ಹರಿಯಾದ ಶ್ರೀಕೃಷ್ಣನ ಮೇಲೆ ಬಹು ಪ್ರತೀಪಂ=ಬಹಳವಾದ ವೈರವನ್ನು ಚಕ್ರುಃ=ಮಾಡಿದರು. ॥ ೮೨ ॥

ತೈಃ ಪ್ರೇರಿತಾಃ ನೃಪತಯಃ ಪಿತರಶ್ಚತೇಷಾಂ ಸಾಕಂ ಬೃಹದ್ರಥಸುತೇನ ಹರೇಃ ಸಕಾಶಮ್ ।
ಯುದ್ಧಾಯ ಜಗ್ಮುರಮುನಾಷ್ಟದಶೇಷು ಯುದ್ಧೇಷ್ವತ್ಯಂತಭಗ್ನ ಬಲದರ್ಪಮದಾಃ ನಿವೃತ್ತಾಃ ॥ ೮೩ ॥

ಅನ್ವಃ- ತೈಃ ಪ್ರೇರಿತಾಃ=ಆ ರಾಜಕುಮಾರರಿಂದ ಪ್ರೇರಿತರಾದ ತೇಷಾಂ = ಆ ರಾಜಕುಮಾರರ ಪಿತರಃ=ತಂದೆಯಂದಿರ್ಯ ನೃಪತಯಃ=ಉಳಿದ ರಾಜಂದಿರು ಬೃಹದ್ರಥಸುತೇನ ಸಾಕಂ = ಜರಾಸಂಧನೊಂದಿಗೆ ಕೂಡಿಕೊಂಡು ಯುದ್ಧಾಯ=ಯುದ್ಧ ಮಾಡುವುದಕ್ಕೋಸ್ಕರ ಹರೇಃ ಸಕಾಶಂ=ಶ್ರೀಕೃಷ್ಣನ ಸಮೀಪಕ್ಕೆ ಜಗ್ಮುಃ=ಹೋದರು. ಅಮುನಾ=ಈ ಕೃಷ್ಣನಿಂದ ಅಷ್ಟದಶೇಷು ಯುದ್ಧೇಷು=ಹದಿನೆಂಟು ಯುದ್ಧಗಳಲ್ಲಿ ಅತ್ಯಂತ ಭಗ್ನಬಲ ದರ್ಪ ಮದಾಃ ಸಂತಃ=ಚೆನ್ನಾಗಿ ನಾಶಹೊಂದಿದ ಸಾವರ್ಥ್ಯ ಅಹಂಕಾರ ಮದ ಇವುಗಳುಳ್ಳವರಾಗಿ ನಿವೃತ್ತಾಃ=ಹಿಂತಿರುಗಿದರು. ॥ ೮೩ ॥

ತೇನಾಗೃಹೀತ ರಥವಾಜಿಗಜಾ ನಿತಾಂತಮ್ ಶಸ್ತ್ರೈಃ ಪರೀಕ್ಷತತನೂಭಿರಲಂ ವಮಂತಃ ।
ರಕ್ತಂ ವಿಶಸ್ತ್ರಕವಚಧ್ವಜವಾಜಿಸೂತಾಃ ಸ್ರಸ್ತಾಂಬರಾಃ ಶ್ಲಥಿತಮೂರ್ಧಜಿನೋ ನಿವೃತ್ತಾಃ ॥ ೮೪ ॥

ಅನ್ವಃ- ತೇ=ಕೃಷ್ಣನೊಂದಿಗೆ ಯುದ್ಧಕ್ಕೆ ಬಂದಿರುವ ನೃಪತಯಃ=ರಾಜರು ತೇನ=ಆ ಕೃಷ್ಣನಿಂದ ಆಗೃಹೀತರಥವಾಜಿಗಜಾಃ=ಚೆನ್ನಾಗಿ ಅಪಹರಿಸಲ್ಪಟ್ಟ ರಥ ಕುದುರೆ ಆನೆ ಇವುಗಳುಳ್ಳ ನಿತಾಂತಂ ಚೆನ್ನಾಗಿ ಶಸ್ತ್ರೈಃ=ಆಯುಧಗಳಿಂದ ಪರಿಕ್ಷತ ತನೂಭಿಃ=ಗಾಯಗೊಳಿಸಲ್ಪಟ್ಟ ಶರೀರಗಳಿಂದ ರಕ್ತಂ=ರಕ್ತವನ್ನು ಅಲಂ ಚೆನ್ನಾಗಿ ವಮಂತಃ=ಕಾರುತ್ತಾ ವಿ...ಸೂತಾಃ ವಿಶಸ್ತ್ರ ಕವಚಧ್ವಜವಾದಿದೂತಾಃ=ಆಯುಧ ಕವಚ ತಮ್ಮ ರಥದ ಬಿಹ್ನೆ ಇವುಗಳು ಇಲ್ಲದವರಾಗಿ ಸ್ರಸ್ತಾಂಬರಾಃಸಂತಃ=ಬಿಡಲ್ಪಟ್ಟ ಬಟ್ಟೆ ಉಳ್ಳವರಾಗಿ ಶ್ಲಥಿತಮೂರ್ಧಜಿನಃ=ಜಾರಿಹೋಗಿರುವ ಮುಕುಟಉಳ್ಳವರಾಗಿ ನಿವೃತ್ತಾಃ=ಹಿಂತಿರುಗಿದರು. ॥ ೮೪ ॥

ಏವಂ ಬೃಹದ್ರಥಸುತೋಪಿ ಸುಶೋಚ್ಯರೂಪ ಆತೋರ್ಜ ಯಯೌ ಬಹುಶಃ ಏವ ಪುರಂಸ್ವಕೀಯಂ ।
ಕೃಷ್ಣೇನ ಪೂರ್ಣಬಲವೀರ್ಯ ಗುಣೇನಮುಕ್ತೋ ಜೀವೇತ್ಯತೀವ ವಿಜಿತಃ ಶ್ವಸಿತಾವಶೇಷಃ ॥ ೮೫ ॥

ಅನ್ವಃ- ಏವಂ= ಈ ಹಿಂದೆ ಹೇಳಿದಂತೆ ಬೃಹದ್ರಥ ಸುತೋಪಿ= ಬೃಹದ್ರಥನ ಪುತ್ರನಾದ ಜರಾಸಂಧನಾದರೂ ಸುಶೋಚ್ಯರೂಪಃಸನ್=ದುಃಖಿತವಾದ ಸ್ವರೂಪ ಉಳ್ಳವನಾಗಿ ಬಹುಶಃಏವ=ಬಹಳವಾಗಿ ಆರ್ತಃಸನ್=ಪೀಡಿತನಾಗಿ ಬಲವೀರ್ಯ ಗುಣೇನ=ಪರಿಪೂರ್ಣಗಳಾದ ಬಲವೀರ್ಯಗಳೆಂಬ ಗುಣಗಳುಳ್ಳ ಕೃಷ್ಣೇನ=ಕೃಷ್ಣನಿಂದ ಜೀವ ಇತ್ಯೇವ=ಬದುಕು ಎಂಬುದಾಗಿ ಮುಕ್ತಃಸನ್=ಬಿಡಲ್ಪಟ್ಟವನಾಗಿ ಅತೀವ ವಿಜಿತಃಸನ್ = ಬಹಳವಾಗಿ ಸೋತವನಾಗಿ ಸ್ವಪುರೀಂ=ತನ್ನ ಪಟ್ಟಣವಾದ ಮಂಗಧವನ್ನು ಯಯೌ=ಹೋದನು. ॥ ೨೫ ॥

ಏವಂ ಗತೇಷು ಬಹುಶೋ ನತಕಂಧರೇಷು ರಾಜಸ್ವಜೋಪಿ ಮಧುರಾಂ ಸ್ವಪುರೀಂ ಪ್ರವಿಶ್ಯ ।
ರಾಮೇಣ ಸಾರ್ಧಂ ಅಖಿಲೈರ್ಯದುಭಿಃ ಸಮೇತೋ ರೇಮೇರಮಾಪತಿರಚಿಂತ್ಯಬಲೋ ಜಯಶ್ರೀಃ॥೨೬॥

ಅನ್ವಃ- ಏವಂ=ಈ ಹಿಂದೇ ಹೇಳಿದ ರೀತಿಯಿಂದ ಬಹುಶಃ=ಬಹಳವಾಗಿ ನತಕಂದರೇಷು=ಕೆಳಗೆ ಬಗ್ಗಿದ ಕುತ್ತಿಗೆ ಉಳ್ಳ ರಾಜಂದಿರು ಗತೇಷು ಸತ್ಸು=ಹಿಂದೆ ಹೋಗುತ್ತಿರಲು ಅಚಿಂತ್ಯಬಲಃ=ಅನಾಲೋಚ್ಯ ಶಕ್ತಿಉಳ್ಳ ಜಯಶ್ರೀಃ=ಜಯ ರೂಪ ಕಾಂತಿಉಳ್ಳ ರಮಾಪತಿಃ=ಲಕ್ಷ್ಮೀಪತಿಯಾದ ಅಜೋಪಿ=ಅನಾದಿಯಾದ ಶ್ರೀ ಕೃಷ್ಣನೂ ಕೂಡ ರಾಮೇಣ ಸಾರ್ಧಂ=ಬಲರಾಮನಿಂದ ಕೂಡಿಕೊಂಡು ಅಖಿಲೈಃ=ಸಮಸ್ತ ಯದುಭಿಃ=ಯಾದವರಿಂದ ಸಮೇತಸನ್=ಕೂಡಿದವನಾಗಿ ಮಧುರಾಂ ಸ್ವಪುರೀಂ ಪ್ರಾಪ್ಯ=ಮಧುರಾಖ್ಯ ತನ್ನ ಪಟ್ಟಣವನ್ನು ಹೊಂದಿ ರೇಮೇ=ಕ್ರೀಡಿಸಿದನು ॥ ೨೬ ॥

ವ್ಯರ್ಥೋದ್ಯಮಾಃ ಪುನರಪಿಸ್ಮ ಸಧಾರ್ತರಾಷ್ಟ್ರಾಃ ಭೀಮಂ ನಿಹಂತು ಮುರುಯತ್ನಮಕುರ್ವತಾಜ್ಞಾಃ ।
ರಾಜ್ಞಾಂ ಸುತಾಸ್ತಮಖಿಲಂ ಸ ವ್ಯರ್ಥಮೇವ ಕೃತ್ವಾ ಚಕ್ರೇ ಜಯಾಯ ಚ ದಿಶಾಂ ಬಲವಾನ್ ಸ್ವಯತ್ನಂ ॥೨೭॥

ಅನ್ವಃ- ಅಜ್ಞಾಃ=ಬುದ್ಧಿ ಇಲ್ಲದ ಧಾರ್ತರಾಷ್ಟ್ರಾ ಸುತರಿಂದ ಕೂಡಿದ ರಾಜ್ಞಾಂ ಸುತಾಃ = ರಾಜ ಕುಮಾರಂದಿರು ವ್ಯರ್ಥೋದ್ಯಮಾಃ ಅಪಿ=ನಿಷ್ಪಯೋಜಕ ಪ್ರಯತ್ನ ಉಳ್ಳವರಾದರೂ ಪುನಃ=ಮತ್ತೂ ಭೀಮಂ=ಭೀಮಸೇನ ದೇವರನ್ನು ನಿಹಂತುಂ=ಕೊಲ್ಲಲು ಉರು ಯತ್ನಂ=ಬಹು ಪ್ರಯತ್ನವನ್ನು ಅಕುರ್ವತಮಾಡದರು ಸ್ಮ=ಆಶ್ಚರ್ಯ! ಸಃ=ಆ ಭೀಮಸೇನನು ಅಖಿಲಂತಂ ಪ್ರಯತ್ನಂ=ಆ ರಾಜಕುಮಾರ ಸ್ವನಾಶೋದ್ದೇಶದಿಂದ ಮಾಡಲ್ಪಟ್ಟ ವಿಲ್ಲಾ ಪ್ರಯತ್ನವನ್ನು ವ್ಯರ್ಥಮೇವ=ವ್ಯರ್ಥವಾದುದನ್ನಾಗಿ ಕೃತ್ವಾ=ಮಾಡಿ ಬಲವಾನ್=ಒಳ್ಳೆಯ ಬಲ ಉಳ್ಳ ಭೀಮನು ದಿಶಾಂಚ ಹತ್ತು ದಿಕ್ಕುಗಳ ವಿಜಯಾಯ=ಗೆಲ್ಲುವುದಕ್ಕೋಸ್ಕರ ಮತಿಂ=ಬುದ್ಧಿಯನ್ನು ಚಕಾರ=ಮಾಡಿದನು. ॥ ೨೭ ॥

ಪ್ರಾಚೀಂ ದಿಶಂ ಪ್ರಥಮಮೇವ ಜಗಾಯ ಪಶ್ಚಾತ್ ಯಾಮ್ಯಾಂ ಬಲೇಶ ಪರಿಪಾಲಿತಯಾ ಸಹಾನ್ಯಾಂ ।
ಯೌ ತೌ ಪುರಾತನದಶಾನನ ಕುಂಭಕರ್ಣೌ ಪುರಾತನ ಮಾತೃಷ್ವಸಾ ತನಯತಾಂ ಚ ಗತೌ ಜಿಗಾಯ ॥ ೨೮ ॥

